SRI K. V. SHANKARA GOWDA (Minister for Education).—

(*a*) No.

(*b*) No estimate has been received so far by the Director of Public Instruction.

(*c*) In view of reply to Clause (*b*) this question does not arise.

ARREST AND RELEASE OF SRI VATAL NAGARAJ AND SRI BANGARAPPA AT NEW DELHI.— *Annuncement*

MR. SPEAKER : I have to inform the Hon. House that a Phonogram has been received by me from the Sub-Divisional Magistrate, New Delhi, this Morning at 7-15A.M. It runs as follows :

" Sri Bangarappa and Sri Vatal Nagaraj, M.L.As. of Mysore arrested at 12-10 P.M. for violation of order under section 144 CrP.C. in front of Parliament House presently lodged in police station details follow "

Probably later in the day we may get further information.

SRI VEERENDRA PATIL :—Sir, I do not have authentic information. But I would like to add that yesterday night at about 11-30 P.M. I got a trunk Call. It seems both the hon. members have been released on bail and they are arriving in Bangalore City this afternoon.

SRI M. NAGAPPA :— I have sent a privilege motion about the arrest of these Members.

MR. SPEAKER : I will consider.

PERSONAL EXPLANATION BY THE CHIEF MINISTER AND SRI N. HUCHAMASTHI GOWDA.

SRI VEERENDRA PATIL :— On a Personal Explanation Sir

ಅಧ್ಯಕ್ಷರೇ, ನಿನ್ನೆ ದುರ್ದೈವದಿಂದ ನನಗೆ ಸಾಕಷ್ಟು ಸಮಯ ಸಿಕ್ಕಲಿಲ್ಲ. ಆದರೆ ಒಂದು ವಿಚಾರ ನಾನು ಪ್ರಸ್ತಾಪ ಮಾಡಬೇಕಾದುದು ಬಹಳ ಅವಶ್ಯಕವಾಗಿತ್ತು. ನಿನ್ನೆ ಆ ವಿಚಾರವನ್ನು ಪ್ರಸ್ತಾಪ ಮಾಡಿದ್ದರೆ ಚೆನ್ನಾಗಿತ್ತು ಎಂದು ನನಗನ್ನಿಸುತ್ತಿದೆ. ಆದರೆ ಸಮಯ ಸಿಕ್ಕಲಿಲ್ಲ. ಐದು ನಿಮಿಷ ಸಿಕ್ಕಿದ್ದರೆ ಪಾಂಗಸಿಹುದಾ ತ್ತು. ನಾನು ಈ ಮನೆಯಲ್ಲಿ ಸ್ವಲ್ಪ ಹೊತ್ತು ಇರಲಿಲ್ಲ. ಆವಾಗ ವಿರೋಧ ಪಕ್ಷದ ಮಾನ್ಯ ಸದಸ್ಯರಾದ ಶ್ರೀ ಹುಚ್ಚಮಾಸ್ತಿ ಗೌಡರು ನನ್ನ ಮೇಲೆ ಒಂದು ಚಾರ್ಜ್ ಮಾಡಿದ್ದಾರೆ ಎಂದು ತಿಳಿದುಕೊಂಡೆ. ಆ ಚಾರ್ಜ್ .....

ಶ್ರೀ ಎನ್. ಹುಚ್ಚಮಾಸ್ತಿ ಗೌಡ :— ಎರಡು ಮೂರು ಮಾಡಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್: —ನನಗೆ ಗೊತ್ತಿದ್ದ ಹಾಗೆ ನನ್ನ ಮೇಲೆ ಒಂದು ಚಾರ್ಜ್ ಮಾಡಿದ್ದಾರೆ. ಪೈಯುಕ್ತಿಕವಾಗಿ ನೇರವಾಗಿ ಚಾರ್ಜ್ ಮಾಡಿದ್ದಾರೆ. ಪೂನದಲ್ಲಿ ಒಂದು ದೊಡ್ಡ ಕೈಗಾರಿಕೆ ಇದೆ ಆ ದೊಡ್ಡ ಕೈಗಾರಿಕೆಯಲ್ಲಿ ನನ್ನ ಷೇರಿದೆ ಎನ್ನುವಂಥ ವಿಚಾರವನ್ನು ಅವರು ಹೇಳಿದ್ದಾರಂತೆ ಮತ್ತು ಅಷ್ಟೊಂದು ದುಡ್ಡು ಮುಖ್ಯ ಮಂತ್ರಿಗಳಿಗೆ ಎಲ್ಲಿಂದ ಬಂತು ಎನ್ನುವಂಥದ್ದನ್ನು ಅವರು ಹೇಳಿದ್ದಾರೆ. ಆದರೆ ಪ್ರಾಸ್ತಾವಿಕ ವಿಚಾರದಲ್ಲಿಯೇ ನಾನು ನಾಲ್ಕಾರು ಮಾತು ಹೇಳಿದ್ದೇನೆ. ಏನು ಇದ್ದರೂ ಜ್ಯುಡಿಷಿಯಲ್ ಇನ್‌ಕ್ವಾಯರಿ ಮಾಡಿ ಎಂದು ಹೇಳುತ್ತಾರೆ. ಮಾನ್ಯ ಸದಸ್ಯರು ಸಂಕ್ಷಿಪ್ತವಾಗಿ ಹೇಳಿದ್ದಾರೆ. ಸ್ವಲ್ಪಮಟ್ಟಿಗೆ ತಪಶೀಲು ಹೇಳಿದ್ದರೆ ಒಳ್ಳೆಯದಾಗುತ್ತಿತ್ತು. ಆ ಇಂಡಸ್ಟ್ರೀ ಯಾವುದು, ಷೇರ್ ಬಂಡವಾಳ ಎಷ್ಟು ಎನ್ನುವುದನ್ನು ಹೇಳಿದ್ದರೆ ಬಹುಶಃ ಉತ್ತರ ಕೊಡಲಿಕ್ಕೆ ಅನುಕೂಲವಾಗುತ್ತಿತ್ತು ಎಂದು ನನಗೆ ಅನಿಸುತ್ತದೆ. ಇದನ್ನು ಪತಕ್ಕೆ ಹೇಳುತ್ತೇನೆ ಆಂದರೆ ಈ ತರಹದ ಚಾರ್ಜಸನ್ನು ವಿವರವಾಗಿ ತಿಳಿಸಿದ್ದರೆ ಅವತ್ತೇ ವಿಪದಿಸಲು ಆಗುತ್ತಿತ್ತು. ಹೋದ ಸಲ ಅಸೆಂಬ್ಲಿಯಲ್ಲಿ ಗವರ್ನರ್ಸ್ ಅಡ್ರಸ್ಸಿಗೆ ಮೋಷನ್ ಆಫ್ ಥ್ಯಾಂಕ್ಸ ಚರ್ಚೆಯ ಕಾಲಕ್ಕೆ ಯಾರೋ ಒಬ್ಬರು ರಿಲೇಷನ್ ಇದ್ದಾರೆ ಎಂದು ಒಂದೇ ಸಮನೆ ಹೇಳಿದರು. ನನಗೆ ಯಾವ ರಿಲೇಷನ್ನೂ ಇಲ್ಲ, ಯಾವ ಸಂಬಂಧಿಕರೂ ಇಲ್ಲ ಎಂದು ಹೇಳಿದರೂ ಕೂಡ ಅವರು ನಿಮ್ಮ ರಿಲೇಷನ್ ಎನ್ನುತ್ತಾರೆ. ಸುಳ್ಳು ಹೇಳಿದ್ದಾರೆ, ಅಸತ್ಯ ಹೇಳಿದ್ದಾರೆ ಎಂದು ಒಂದು ಪ್ರಿವಿಲೆಜ್ ಮೋಷನ್ ತರಲು ಮಾನ್ಯ ಸದಸ್ಯರೊಬ್ಬರು ಪ್ರಯತ್ನ ಮಾಡಿದರು. ಇದನ್ನು ನೋಡಿದರೆ ಇದರಲ್ಲಿ ಏನೋ ಆರ್ಗನೈಜ್ಡ್ ಆಗಿ ನಡೆಯುತ್ತಿದೆ, ಎಂದು ಕಾಣುತ್ತದೆ. ಮಂತ್ರಿಗಳು ಅಥವಾ ಮುಖ್ಯ ಮಂತ್ರಿಗಳು ವಲ್ನರೇಬಲ್ ಪೊಜಿಷನ್ನಿನಲ್ಲಿ ಇದ್ದಾರೆ. ಅವರು ಸ್ವಲ್ಪ ಮನಸ್ಸು ಮಾಡಿದರೆ ಹತ್ತಾರು ಲಕ್ಷ ಸಂಪಾದನೆ ಮಾಡಬಹುದು. ಇನ್‌ವೆಸ್ಟ್‌ಮೆಂಟ್ ಮಾಡಿರಬಹುದು ಎನ್ನುವ ಅಭಿಪ್ರಾಯ ಬರುತ್ತದೆ, ಇದರಿಂದ ಜನಾಭಿಪ್ರಾಯ ಏನು ಆಗುತ್ತದೆ ನೋಡಬೇಕು? ಮುಖ್ಯ ಮಂತ್ರಿಗಳೇ ಆಗಲಿ, ಇಂಥ ಅಧಿಕಾರ ಸ್ಥಾನದಲ್ಲಿ ಇರುವವರು ಅಧಿಕಾರ ದುರುಪಯೋಗ ಮಾಡಿದ್ದರೂ ಮಾಡಿರ ಬಹುದು ಎನ್ನುವ ಅಭಿಪ್ರಾಯ ಮೂಡುತ್ತದೆ. ತಪ್ಪಿತಸ್ಥರ ಮೇಲೆ ದೋಷಾರೋಪಣೆ ಮಾಡಬಾರದು ಎನ್ನುವ ವಿಚಾರದಿಂದ ಇದನ್ನು ಹೇಳುತ್ತಿಲ್ಲ. ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ಒಂದು ಸ್ಟ್ಯಾಂಡರ್ಡ್ ಒಂದು ಕನ್‌ಸ್ಟಿಟ್ಯೂನ್ಸೀ ಬೆಳೆದುಕೊಂಡು ಬರಬೇಕಾಗಿದೆ. ಇದನ್ನು ಬಹಳ ಕಳಕಳಿಯಿಂದ ಹೇಳುತ್ತೇನೆ. ನಾನು ಡಿಟೇಲ್ಸ್ ಕೇಳಿದರೆ ಜ್ಯುಡಿಷಿಯಲ್ ಇನ್‌ಕ್ವಾಯರಿ ಮಾಡಿರಿ ಎಂದು ಹೇಳುತ್ತಾರೆ. ಜ್ಯುಡಿಷಿಯಲ್ ಇನ್‌ಕ್ವಯರಿ ಮಾಡುವುದು ಬೇಡ. ಈ ಮಾನ್ಯ ಸಭೆಯಲ್ಲಿ ಹೇಳುತ್ತೇನೆ ನನ್ನ ಷೇರು ಎಷ್ಟು ಇದೆ ಅದನ್ನು ಹುಚ್ಚ ಮಾಸ್ತಿ ಗೌಡರಿಗೆ ಕೊಡುತ್ತೇನೆ, ಅದನ್ನು ಎಷ್ಟಕ್ಕೆ ಅವರು ತೆಗೆದುಕೊಳ್ಳುತ್ತಾರೆಂದು ಹೇಳಲಿ. ಮಾನ್ಯ ಸ್ಪೀಕರರಿಗೆ ನಾನು ಬರೆದುಕೊಡುತ್ತೇನೆ ಈ ಇಂಡಸ್ಟ್ರೀಯಲ್ಲಿ ಇರುವ ಷೇರ್ ನಿಮಗೆ ವರ್ಗಾಯಿಸಿ ಕೊಡುತ್ತೇನೆ ಎಂದು.

Interruption by Sri R. Dayananda Sagar

MR. SPEAKER:—It is not fair on the part of the Hon. Member to interrupt the Hon. Chief Minister.

SRI R. DAYANANDA SAGAR:—Why?

MR. SPEAKER:—May I tell the Hon. Member that he should follow correct parliamentary practice? He is not entitled to intervene like

SRI R. DAYANANDA SAGAR:—I agree.

ಶ್ರೀ ವೀರೇಂದ್ರ ಪಾಟೀಲ್: —ಇದು ಪಾರ್ಲಿಮೆಂಟರಿ ಪ್ರಜಾರಾಜ್ಯದ ಪವಿತ್ರ ಮಂದಿರ ಇದು. ಈ ಮಂದಿರದಲ್ಲಿ ನಿಮ್ಮದು ಏನು ಇದೆ ಇದು ನನಗೆ ಬಹಳ ಗೊತ್ತಿದೆ.

ಶ್ರೀ ಆರ್. ದಯಾನಂದ ಸಾಗರ್:—ಮಾನ್ಯ ಅಧ್ಯಕ್ಷರೇ,..... ...

Mr. SPEAKER:—The Hon. member is again interrupting the Hon. Chief Minister. It is not correct for the Hon. member to go on making frequent interruptions,

ಶ್ರೀ ಹೆಚ್. ಎನ್. ನಂಜೇಗೌಡ:— ಸ್ವಾಮಿ, ನನ್ನದು ಒಂದು ಕ್ರಿಯಾಲೋಪ.

Mr. SPEAKER:—I request Hon. Members to say whatever they want to say according to parliamentary procedure.

SRI. R. DAYANANDA SAGAR:—I also know something about it. Let the Hon. Chief Minister subject himself to a judicial enquiry. I am also prepared to face a judicial enquiry.

Mr. SPEAKER:—It is not correct to make a running commentary when the Chief Minister is speaking.

SRI. R. DAYANANDA SAGAR:—I am prepared to say at his face. We are not cowards.

Mr. SPEAKER:—I request the Hon. Member to follow parliamentary procedure. It is not fair to make a running commentary. If there is anything on which the Hon. Member wants to make a personal statement, I will permit him; but he should not disturb the Chief Minister.

ಶ್ರೀ ಎಚ್. ಎನ್. ನಂಜೇಗೌಡ:—ಪಾಯಿಂಟ್ ಆಫ್ ಆರ್ಡರ್. ಈಗ ತಾನೇ ಮುಖ್ಯ ಮಂತ್ರಿಗಳು ರೆಫರ್ ಮಾಡಿದರು. ಮಾನ್ಯ ಸದಸ್ಯರೊಬ್ಬರು ಪ್ರಿವಿಲೆಜ್ ಮೋಷನ್ ಕಳಿಸಿ ಕೊಟ್ಟಿದ್ದರು ಎಂದು. ನನ್ನ ಕ್ರಿಯಾಲೋಪ ಇಷ್ಟು. ನನ್ನ ಪ್ರಿವಿಲೆಜ್ ಮೋಷನ್ ಚರ್ಚೆಗೆ ತೆಗೆದುಕೊಂಡಿದ್ದರೆ ಪ್ರಿವಿಲೆಜ್ ಕಮಿಟಿಗೆ ಕಳುಹಿಸಲು ಅವಕಾಶವಾಗುತ್ತಿತ್ತು, ಆವರೊಬ್ಬರೇ ಸತ್ಯ ಹರಿಶ್ಚಂದ್ರ ಎನ್ನುವಹಾಗೆ ಮಾತನಾಡುತ್ತಾರೆ. Therefore it would not be in order for the Speaker to allow such comments on the privilege motion which was not discussed here. If necessary, let the Speaker refer that privilege motion to the Privileges Committee or the Rules Committee and let the Chief Minister face it. I will also substantiate my point there. I will prove whether Shanker Keni is his relative or not. I am ready to prove it before the Privileges Committee.

Mr. SPEAKER:—As far as I have understood the Chief Minister he seemed to be making only a casual reference to it, I do not think he was speaking on the privilege motion or the action taken on it. I can only say that any personal explanation should be non-controversial and it should be brief. I do not find any substance in the point of order.

ಶ್ರೀ ಕೆ. ಪ್ರಭಾಕರ್:—ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಇಲ್ಲದೇ ಇರುವಾಗ ಒಂದು ಪ್ರಸಂಗ ನಡೆದಿದೆ. ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡುವ ಇಂಥ ಸಂದರ್ಭ ಬರುತ್ತದೆ. ನಿನ್ನೆ ನಡೆದದ್ದು ರಿಕಾರ್ಡಿನಲ್ಲಿ ಇದೆ. ರಿಕಾರ್ಡ್ ನೋಡಿ ಹೇಳದೆ, ಅವರು ಸದಸ್ಯರನ್ನೇ ಕೇಳುತ್ತಿದ್ದಾರೆ. ಹಾಗೆ ಮಾಡದೆ ರಿಕಾರ್ಡಿನಲ್ಲಿ ಇರುವುದನ್ನು ಕೊಟೇಷನ್ ಹೇಳಿದ್ದರೆ ಒಳ್ಳೆಯದು. ಆ ರೀತಿ ತೂಕ ಮಾಡಿ ನ್ಯಾಯಬದ್ಧವಾಗಿ ವರ್ತನೆ ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

Mr. SPEAKER:—It is a good suggestion that the Hon. Member is making. Probably, the House will know that I wanted to put the demands to the vote of the House at 6 o'clock as per the directive of the House. At that time the Chief Minister was still on his legs continuing his reply. At that time it was the Leader of the Congress(R) Party Sri Siddaveerappa who suggested that the Chief Minister might give his personal explanation the next day. Otherwise the Chief Minister would have finished his personal explanation yesterday itself. It is only as per that understanding that the Chief Minister is making personal explanation today.

ಶ್ರೀ ವೀರೇಂದ್ರ ಪಾಟೀಲ:—ಶ್ರೀಮಾನ್ ಹುಚ್ಚಮಾಸ್ತಿಗೌಡರಿಗೆ ನಾನು ಹೇಳುತ್ತೇನೆ. ವಿಥ್ ಆಲ್ ಸಿನ್‌ಸಿರಿಟಿ ಅಂಡ್ ಆಸೆಪ್ಟೀ ಆಟ್ ಮೈ ಕಮಾಂಡ್ ನಿಮ್ಮ ಸಮಕ್ಷಮದಲ್ಲಿ ಕೇಳುತ್ತೇನೆ. ಈ ಷೇರನ್ನು ಅವರು ಎಷ್ಟಕ್ಕೆ ತೆಗೆದುಕೊಳ್ಳುತ್ತಾರೆ ಎಂದು. ಇದನ್ನು ಇಲ್ಲಿ ಬೇಕಾದರೆ ಬರೆದು ಕೊಡುತ್ತೇನೆ. ಬೇಕಾದರೆ ಸ್ಟಾಂಪ್ ಪೇಪರಿನಲ್ಲಿ ಸೋಮವಾರ ದಿನ ರಿಜಿಸ್ಟರ್ ಮಾಡಿ ಕೊಡುತ್ತೇನೆ. ಐದು ಹತ್ತು ಸಾವಿರವಾಗಿದ್ದರೆ ಇಷ್ಟು ದೊಡ್ಡ ಪ್ರಶ್ನೆಯಾಗುತ್ತಾ ಇರಲಿಲ್ಲ. ೮ಲಕ್ಷ, ೧೦ಲಕ್ಷ, ೧೫ಲಕ್ಷ, ೨೦ಲಕ್ಷ, ೪೦ಲಕ್ಷ ಆದರೂ ಆಗಬಹುದು ಎಂದು ಅವರು ತಿಳಿದುಕೊಂಡಿರಬಹುದು. ಎಷ್ಟಕ್ಕೆ ಈ ಷೇರುಗಳನ್ನು ತೆಗೆದುಕೊಳ್ಳುತ್ತಾರೆ ಎನ್ನುವುದು ಗೊತ್ತಾದರೆ ಪರವಾ ಇಲ್ಲ, ನನ್ನ ದುಡ್ಡು ನನಗೆ ಬರುತ್ತದೆ ಎಂದು ಹೇಳ ಬಹುದು. ಈಗ ಕೇಳುತ್ತೇನೆ ಅವರು ಆಫರ್ ಮಾಡುವುದಕ್ಕೆ ತಯಾರು ಇದ್ದಾರೆಯೇ?

SRI. H. SIDDAVEERAPPA:—Under the Transfer of Property Act both the seller and the buyer must disclose what he is selling and what he is buying. Unless the seller discloses what he is selling, how is the buyer to offer his price?

ಶ್ರೀ ವೀರೇಂದ್ರ ಪಾಟೀಲ್ :—ನಾನು ಇದನ್ನೆಲ್ಲಾ ಏತಕ್ಕೆ ಹೇಳುತ್ತಿದ್ದೇನೆಂದರೆ—ಈ ಮಾನ್ಯ ಸಭೆಯಲ್ಲಿ ನಾವು ಯಾರೇ ಆಗಲಿ ಏನಾದರೂ ಒಂದು ಮಾತನಾಡಬೇಕಾದರೆ ಅದನ್ನು ಬಹಳ ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ : ಅಲ್ಲದೆ ಒಂದು ಅಧಿಕಾರವಾಣಿಯಿಂದಲೂ ಕೂಡ ಮಾತನಾಡಬೇಕಾಗುತ್ತದೆ. ಇಲ್ಲಿ ಯಾರು ಏನು ಹೇಳಿದರೂ ಅದನ್ನು ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಆದರೆ ನೆನ್ನೆಯ ದಿವಸ ಈ ಸಭೆಯಲ್ಲಿ ನಡೆದ ಕಾರ್ಯಕಲಾಪಗಳು ಈ ದಿವಸ ಪತ್ರಿಕೆಗಳಲ್ಲಿ ವರದಿಯಾಗಿವೆ. ಅದರಲ್ಲಿ ನೆನ್ನೆ ಇಲ್ಲಿ ಮುಖ್ಯ ಮಂತ್ರಿಯ ಮೇಲೆ ಕೆಲವು ಆರೋಪಣೆಗಳನ್ನು ಮಾಡಿದ್ದಾರೆ. ಅವುಗಳಲ್ಲಿ ಸತ್ಯವೆಷ್ಟೋ ಅಸತ್ಯವೆಷ್ಟೋ? ಆದಾಗ್ಯೂ ಸಾರ್ವಜನಿಕರಲ್ಲಿ ಆ ಬಗ್ಗೆ ಒಂದು ಸಾಕಷ್ಟು ಉಹಾಪೋಹಗಳು ಏಳಬಹುದು. ನಾನು ಪೂನಾದಲ್ಲಿ ನನ್ನ ಹೆಸರಿನಲ್ಲಿ ಇಲ್ಲದೇ ಇನ್ನಾರ ಹೆಸರಿನಲ್ಲೋ ಷೇರುಗಳನ್ನು ಹಾಕಿ ಒಂದು ಇಂಡಸ್ಟ್ರಿಯನ್ನು ನಡೆಸಲಾಗುತ್ತಿದೆ ಎಂದು ಶ್ರೀಮಾನ್ ಎನ್. ಹುಚ್ಚೆ ಮಾಸ್ತಿ ಗೌಡರು ಒಂದು ಆಪಾದನೆ ಮಾಡಿದ್ದಾರೆ. ಇಂಥ ಒಂದು ಗುರುತರವಾದ ಆಪಾದನೆ ಏಕಾ ಏಕಿಯಾಗಿ ಅಧಿಕಾರ ಸ್ಥಾನದಲ್ಲಿರತಕ್ಕವರ ಬಗ್ಗೆ ಬರುವುದೆಂದರೆ ಅದು ಅಷ್ಟು ಭೂಷಣವಾದುದು ಅಲ್ಲ. ನಾನು ಹುಟ್ಟಿದ ಮೇಲೆ ನಿಜವಾಗಿಯೂ ಆ ಪೂನವನ್ನು ಎರಡಾ ವರ್ತಿಗಿಂತ ಜಾಸ್ತಿ ನೋಡಿಲ್ಲ. ಅಲ್ಲಿ ಯಾವ ಬೀದಿ ಎಲ್ಲಿದೆ ಎನ್ನುವುದು ಸಹಾ ನನಗೆ ಗೊತ್ತಿಲ್ಲ. ಆದರೆ ಈ ಸಂದರ್ಭದಲ್ಲಿ ಮಾನ್ಯ ಸಿದ್ಧ ವೀರಪ್ಪನವರು ಆ ಇಂಡಸ್ಟ್ರಿಯಲ್ಲಿ ನಾನು ಎಷ್ಟು ಬಂಡವಾಳ ಹಾಕಿದ್ದೇನೆಂಬುದನ್ನು ಹೊರಗೆಡವದೆ ಇದ್ದರೆ ಅದರ ಬಗ್ಗೆ ಒಂದು ಆಫರ್ ಕೊಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆಂದು ಪ್ರಶ್ನೆ ಮಾಡಿದ್ದಾರೆ. ಅದಕ್ಕೆ ನಾನಾದರೂ ಹೇಳುವುದಿಷ್ಟೆ :

(ಶ್ರೀ ಎಂ. ವೀರೇಂದ್ರ ಪಾಟೀಲ್)

ಅದರಲ್ಲಿ ನಾನು ಹಾಕಿರತಕ್ಕ ಬಂಡವಾಳ ಅಂದರೆ ಅದು ಶೂನ್ಯ. ನನಗೆ ಘೂನಾದಲ್ಲಿರತಕ್ಕ ಯಾವ ಇಂಡಸ್ಟ್ರಿಯ ಪರಿಚಯವೂ ಇಲ್ಲ ಮತ್ತು ಅವುಗಳಲ್ಲಿವೆ ಎಂಬುದೂ ಕೂಡ ನನಗೆ ಗೊತ್ತಿಲ್ಲ. ಹೀಗಿರುವಾಗ ಶ್ರೀ ಹುಚ್ಚ ಮಾಸ್ತಿಗೌಡರು ಆ ಬಗ್ಗೆ ಏನು ಆಫರ್ ಕೊಡುತ್ತಾರೆಂದು ಕೇಳುವುದಕ್ಕೆ ಇಷ್ಟ ಪಡುತ್ತೇನೆ?

Sri H. N. NANJE GOWDA : He has most conveniently chosen to refute this allegation but he has not cared to refute the allagations made on prior occations.

ಶ್ರೀ ವೀರೇಂದ್ರ ಪಾಟೀಲ್ :—ಆದರೆ ನಾನೀಗ ಒಂದು ಸ್ಪೋರ್ಟಿವ್ ಆಫರನ್ನು ಕೊಡುತ್ತೇನೆ. ನಾವೆಲ್ಲರೂ ಸೇರಿ ಈ ಪ್ರಜಾ ಪ್ರಭುತ್ವ ಆಡಳಿತದಲ್ಲಿ ಒಂದು ಪ್ಯೂರಿಟಿಯನ್ನು ಬೆಳಸ ಬೇಕಾಗಿದೆ; ಈ ದಿವಸ ಇದರ ಅವಶ್ಯಕತೆ ಬಹಳವಾಗಿದೆ. ಶ್ರೀ ಹುಚ್ಚ ಮಾಸ್ತಿ ಗೌಡರು ಈಗಾಗಲೆ ಏನೊಂದು ಆಪಾದನೆ ಮಾಡಿದ್ದಾರೆ ಅದರ ಬಗ್ಗೆ ಅವರಿನ್ನೂ ಸಾಹಿತ್ಯವನ್ನು ಮತ್ತು ಸಾಕ್ಷವನ್ನು ಸಂಗ್ರಹಣೆ ಮಾಡಿಕೊಳ್ಳಲಿ. ಆದರೆ ಅವರು ಇದರ ಬಗ್ಗೆ ವಿಚಾರಣೆ ನಡೆಸಲು ಒಂದು ಜುಡಿಷಿಯಲ್ ಎನ್‌ಕ್ವೈರಿ ಕಮಿಟಿಯನ್ನು ಮಾಡಬೇಕೆಂದು ಕೇಳಿದ್ದಾರೆ. ಹಾಗೆ ಅದನ್ನು ಮಾಡಿದರೆ ಸರ್ಕಾರಕ್ಕೆ ವೃಥಾ ಅಪಾರವಾಗಿ ದುಡ್ಡು ವ್ಯಯವಾಗುತ್ತದೆ. ಸಂಬಳ ಸಾರಿಗೆಗೆ ಹಣವನ್ನು ಖರ್ಚು ಮಾಡಬೇಕಾಗುತ್ತದೆ, ಅದಕ್ಕೆಲ್ಲಾ ಸರ್ಕಾರದಲ್ಲಿ ಈಗ ಹಣವಿಲ್ಲ. ಆಗಕ್ಕಾಗಿ ನಾನೀಗ ಏನು ಒಂದು ಸಲಹೆ ಮಾಡುತ್ತಿದ್ದೇನೆ ಎಂದರೆ ಈಗಾಗಲೆ ಆ ಮಾನ್ಯ ಸದಸ್ಯರು ಏನು ನನ್ನ ಮೇಲೆ ಒಂದು ಚಾರ್ಜನ್ನು ತಂದಿದ್ದಾರೆ ಅದನ್ನು ಅವರು, ಈ ಮನೆಯಲ್ಲಿ ಮಾಡಿದ್ದರಿಂದ ಇಲ್ಲಿ ಅವರ ಬಗ್ಗೆ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಬರುವಂತಿಲ್ಲ. ಆದ್ದರಿಂದ ಅವರು ಇದೇ ಚಾರ್ಜನ್ನು, ಆಪಾದನೆಗಳನ್ನು ಈ ಮನೆಯ ಹೊರಗಡೆ ನನ್ನ ಮೇಲೆ ಮಾಡಲಿ ಆಗ ನಾನು ಅವರ ಬಗ್ಗೆ ನ್ಯಾಯಾಲಯದಲ್ಲಿ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಒಂದು ಅವಕಾಶವುಂಟಾಗುತ್ತದೆ. ಇದೊಂದು ಸ್ಪೋರ್ಟಿವ್ ಆಫರ್ ಎಂದು ಅವರು ಭಾವಿಸಬೇಕು. ಅವರ ಆಪಾದನೆಯಲ್ಲಿ ಏನಾದರೂ ಸತ್ಯವಿದ್ದರೆ ಅದರಿಂದ ನಾನು ಮಾಡತಕ್ಕ ಮಾನನಷ್ಟ ವೊಕದ್ದಮ್ಮೆಯಲ್ಲಿ ನನಗೆ ಕೆಡುಕಾಗುತ್ತದೆ. ಹಾಗೆ ಅವರ ಆಪಾದನೆಗಳನ್ನು ಸತ್ವವಿಲ್ಲ ಎಂದಾಗ ಅವರು ಅದರ ಬಗ್ಗೆ ಶಿಕ್ಷೆಯನ್ನು ಇಲ್ಲವೇ ಜುಲ್ಮಾನೆಯನ್ನು ಅನುಭವಿಸಬೇಕಾಗುತ್ತದೆ. ಹೀಗಿರುವುದರಿಂದ ಈ ಮನೆಯಲ್ಲಿ ಯಾರು ವೈಯುಕ್ತಿಕವಾಗಿ ವೀರೇಂದ್ರ ಪಾಟೀಲರು ಹೀಗೆ ಮಾಡಿದ್ದಾರೆಂದು ಇಲ್ಲಿ ಆಪಾದನೆಗಳನ್ನು ಮಾಡುತ್ತಾರೋ ಅವರು ಇಲ್ಲಿ ಮಾಡುವುದರ ಬದಲು ಬೇರೆ ಹೊರಗಡೆಯಲ್ಲಿ ಮಾಡಲಿ ಆಗ ನಾನು ಅವರ ಬಗ್ಗೆ ಡಿಫಮೇಷನ್‌ಗೆ ಕೇಸ್ ಹಾಕುತ್ತೇನೆ, ಆ ಬಗ್ಗೆ ಆಕ್ಷನ್ ತೆಗೆದುಕೊಳ್ಳುತ್ತೇನೆ.

Sri M. S. KRISHNAPPA :—The Hon. Chief Minister just now made a statement ಇಲ್ಲಿ ಯಾರು ಅವರ ಮೇಲೆ ಒಂದು ಆರೋಪಣೆಯನ್ನು ಮಾಡಿದ್ದಾರೆ, ಅವರು ಅದೇ ಆರೋಪಣೆಗಳನ್ನು ಹೊರಗಡೆ ಬೇರೆ ಕಡೆ ಮಾಡಲಿ ಆಗ ಅವರು ಹಾಗೆ ಮಾತನಾಡಿದವರ ಬಗ್ಗೆ ಡಿಫಮೇಷನ್‌ಗೆ ಕೇಸ್ ಹಾಕುತ್ತೇನೆಂದು ಹೇಳಿರತಕ್ಕ ಮಾತುಗಳವು ಇಲ್ಲಿರತಕ್ಕ ವಿರೋಧ ಪಕ್ಷಗಳ ಸದಸ್ಯರನ್ನು ಪೆದರಿಸತಕ್ಕ ಮಾತಾಗಿವೆ. ಅವು ಒಂದು ರೀತಿಯಲ್ಲಿ ನೀವು ಹೊರಗಡೆ ಬನ್ನಿ ಒಂದು ಕೈ ನೋಡಿಕೊಳ್ಳುತ್ತೇನೆ ಅನ್ನುವಂತೆ ಮಾತನಾಡಿದ್ದಾರೆ.

ಅಧ್ಯಕ್ಷರು :—ತಾವು ದಯವಿಟ್ಟು ಕುಳಿತು ಕೊಳ್ಳಿ.

ಶ್ರೀ ಎಚ್. ಎಸ್. ಸಂಜೇಗೌಡ : ನಾವು ರಾಜ್ಯಕ್ಕೆ ಸಂಬಂಧಪಟ್ಟ ನೀರಾವರಿ ಯೋಜನೆಗಳ ಬಗ್ಗೆ ಮತ್ತು ಮಂಗಳೂರು ಗೊಬ್ಬರ ಕಾರ್ಖಾನೆ ವಿಚಾರದಲ್ಲಿ ಏನಾದರು ಭಾಷಣಗಳನ್ನು ಹೊರಗಡೆ ಮಾಡಿದರೆ ಆಗಲೂ ಅವು ಡಿಫಮೇಷನ್‌ಗೆ ಅವಕಾಶ ಮಾಡಿಕೊಡುತ್ತವೆಯೆ?

Sri M. NAGAPPA :—Sir, I rise to a point of order. The Chair knows what is the scope of personal explanation of a member. My point of order is under rule 293 read with Rule 311 whether the Chief

(Sri M. NAGAPPA)

Minister can raise such matters which are debatable. I request the Chair to direct the Cheif Minister not to refer to such mattars on the floor of the house which amount to a threat not only to the member who has made the allegation but to every member.

Mr. SPEAKER : I have very carefully listened to what the cheif Minister was saying. In fact, he said that there is no truth in the allegation made by the hon. member and in support of his statement he made a sporting offer to the hon. member asking him to make the same statement outside the House, so that its veracity could be tested in a court of law. I do not find anything irrelevent in what the chief Minister has said. It is just a supporting offer made by the Chief Minister. Therefore, there is no point of order.

ಶ್ರೀ ವೀರೇಂದ್ರ ಪಾಟೀಲ್ : ಅನೇಕ ಸದಸ್ಯರು ಆಕ್ಷೇಪಣೆ ಎತ್ತಿದ್ದಿರಲಿ, ಮಾನ್ಯ ನಾಗಪ್ಪನವರು ಆಕ್ಷೇಪಣೆ ಎತ್ತಿದ್ದನ್ನು ನೋಡಿ ನನಗಂತೂ ಬಹಳ ಆಶ್ಚರ್ಯವಾಗಿದೆ. ಸರ್ಕಾರದ ಪರವಾಗಿ ನನ್ನನ್ನು ಆರೋಪಣೆ ಮಾಡುವುದಕ್ಕೂ ಮತ್ತು ನನ್ನನ್ನು ವೈಯಕ್ತಿವಾಗಿ ದೂಷಣೆ ಮಾಡುವುದಕ್ಕೂ ಮತ್ತು ನನ್ನ ಮೇಲೆ ಅಪಾದನೆ ಮಾಡುವುದಕ್ಕೂ ಬಹಳ ವ್ಯತ್ಯಾಸವಿದೆ. ಇಲ್ಲಿ ಈಗ ಉದ್ಭವಿಸಿರತಕ್ಕದ್ದು ನನ್ನ ವೈಯಕ್ತಿಕವಾದ ವಿಚಾರ, ನಾನು ಪೂನಾದಲ್ಲಿ ಯಾವುದೋ ಒಂದು ಇಂಡಸ್ಟ್ರಿಯಲ್ಲಿ ನನ್ನ ವೈಯಕ್ತಿಕ ಬಂಡವಾಳವನ್ನು ಹಾಕಿದ್ದೇನೆಂದೂ ಅದನ್ನು ರುಜುವಾತು ಮಾಡುವುದಕ್ಕೆ ಶ್ರೀ ಹುಚ್ಚೆ ಮಾಸ್ತಿಗೌಡರು ತಯಾರಿಗಿರುವುದಾಗಿಯೂ ಇಲ್ಲಿ ಒಂದು ಅಪಾದನೆ ಮಾಡಿದ್ದಾರೆ. ಅದಕ್ಕಾಗಿ ಒಂದು ಜರಡಿಷಿಯಲ್ ಬಾಡಿಯನ್ನು ವಿಚಾರಣೆಗಾಗಿ ಅಪಾಯಿಂಟ್ ಮಾಡಬೇಕೆಂದೂ ಅವರು ಕೇಳಿದ್ದ ಸಂದರ್ಭದಲ್ಲಿ ನಾನು ಅದನ್ನು ಮಾಡಿದರೆ ಸರ್ಕಾರಕ್ಕೆ ವೃಥಾ ಹಣ ವ್ಯಯವಾಗುತ್ತದೆ, ಆದ್ದರಿಂದ ಅದು ಬೇಡ, ಆದಕ್ಕೆ ನಾನು ಎರಡನೇ ದಾರಿಯನ್ನು ಸೂಚಿಸುತ್ತೇನೆಂದು ಈ ಒಂದು ವಿಚಾರವನ್ನು ಹೇಳಿದೆ.

10-00 A.M.

ಕೋರ್ಟಿನಲ್ಲಿ ಡೆಫಮೇರ್ಷ್ ಸೂಟ್ 'ಈವೊತ್ತು ಹಾಕಿದ್ದೇ ಆದರೆ ಅದನ್ನು ಯಾವ ರೀತಿಯಿಂದ ಬೇಕಾದರೂ ಎನ್‌ಕ್ವೈರಿ ಮಾಡುವುದಕ್ಕೆ ಸಾಧ್ಯ ಇದೆ. ಇಲ್ಲವೇ ಅವರು ಕೋರ್ಟಿನಲ್ಲಿ ಕೇಸ್ ಹಾಕಿದ್ದೇ ಆದರೆ ನಾನು ಅಕ್ಯೂಸ್ಡ್ ಆಗಿಹೋಗುವುದಕ್ಕೆ ಸಿದ್ಧನಿದ್ದೇನೆ. ಗೌರ್ನಮೆಂಟ್ ಮೇಲೆ ಛಾರ್ಜು ಮಾಡುವುದು ಬೇರೆ, ವೈಯಕ್ತಿಕವಾಗಿ ವಿರೇಂದ್ರಪಾಟೀಲರ ಮೇಲೆ ಛಾರ್ಜು ಮಾಡುವುದು ಬೇರೆ. ಅದಕ್ಕಾಗಿ ವೀರೇಂದ್ರ ಪಾಟೀಲರ ಮೇಲೆ ಒಂದು ಪರ್ಸನಲ್ ಛಾರ್ಜು ಬಂದಾಗ ಅದು ಜುಡಿಷಿಯರಿ ಡಿಸೈಡ್ ಮಾಡುವುದಕ್ಕೆ ಅವಕಾಶ ಇರಬೇಕು. ಇಲ್ಲದಿದ್ದರೆ ಅವರು ಅಪಾದನೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು. ಅವರು ಈ ಮನೆಯಲ್ಲಿ ಏನು ಹೇಳುವುದಕ್ಕೂ ಹಕ್ಕು ಇದೆ. ಸ್ವಲ್ಪಮಟ್ಟಿಗೆ ನನಗೂ ಕಾನೂನು ಗೊತ್ತಿದೆ. ಈ ಮನೆಯಲ್ಲಿ ಏನು ಹೇಳಿದರೂ ಸದಸ್ಯರಿಗೆ ಇಮ್ಯೂನಿಟಿ ಇದೆ. ನಾನು ಡೆಪ್ಯೂಟಿ ಮಿನಿಸ್ಟರ್ ಆಗಿದ್ದಾಗ ಡೆಫಮೇರ್ಷ ಕೇಸ್ ಹಾಕಿದ್ದೆ. ಅಲ್ಲಿ ಏನು ನಡೆಯಿತು ಎನ್ನುವ ವಿಚಾರ ಈಗ ಹೇಳಬೇಕಾಗಿಲ್ಲ ಈ ಮನೆಯಲ್ಲಿ ಹೇಳುವುದಕ್ಕೆ ಇಮ್ಯೂನಿಟಿ ಇದೆ. ಬೇಕಾದ್ದೆಲ್ಲಾ ಹೇಳಬಹುದು ತಾವು ಸ್ಪೀಕರ್ ಸಾಹೇಬರಾಗಿದ್ದೀರಿ. ತಮ್ಮ ವಿಚಾರದಲ್ಲಿ ಯಾರಾದರೂ ಹೇಳಬಹುದು, ಬೇಕಾದಷ್ಟು ದುಡ್ಡು ಮಾಡಿದ್ದಾರೆ, ಬೇಕಾದಷ್ಟು ಆಸ್ತಿಪಾಸ್ತಿ ಮಾಡಿದ್ದಾರೆ ಎಂದು ಹೇಳಬಹುದು. ಇಲ್ಲಿ ಬೇಕು ಬೇಕಾದ್ದು ಹೇಳಬಹುದು. ಏನು ಹೇಳಿದರೂ ತಪ್ಪಿಸಿಕೊಂಡು ಹೋಗುವುದಕ್ಕೆ ಸಾಧ್ಯ ಇದೆ. ಅದಕ್ಕಾಗಿ ನಾನು ಹೇಳಿದೆ. ಯಾರು ಛಾರ್ಜಸ್ ಮಾಡಿದ್ದಾರೆ ಅವರು ಅದನ್ನು ಧೈರ್ಯದಿಂದ ಪ್ರೂವ್ ಮಾಡಬೇಕೇ ಹೊರತು ಅದು ಬಿಟ್ಟು ಲಾಂಜ್‌ನಲ್ಲಿ ಯಾರೋ ಏನೋ ಹೇಳಿದರು ಅದು ನನ್ನ ಕಿವಿಗೆ ಬಿತ್ತು ಎಂದು ಅಷ್ಟು ಲಘುವಾಗಿ ಮಾತನಾಡುವ ಸ್ಥಾನವಲ್ಲ.

ಇನ್ನೊಂದು ಮಾತು ಹೇಳುತ್ತೇನೆ. ಛಾರ್ಜಸ್ ಪ್ರೂವ್ ಆದರೆ ಬಹುಶಃ ನನಗೆ ಡಿಸ್ಮಿಸ್ ಆಗುತ್ತದೆ ಎಂದು ಲೆಕ್ಕ ಹಾಕಿದ್ದೇನೆ. ನಾನು ಒಂದು ಸ್ಪೋರ್ಟಿವ್ ಆಫರ್ ಕೊಡುತ್ತೇನೆ. ಅವರು ಈ ಕೇಸನ್ನು ಕೋರ್ಟಿಗೆ ತೆಗೆದುಕೊಂಡು ಹೋಗಲಿ. ನಾನು ಕೇವಲ ಮುಖ್ಯಮಂತ್ರಿ ಸ್ಥಾನ ಬಿಡುವುದು ಮಾತ್ರವಲ್ಲ, ರಾಜಕೀಯದಿಂದ ಕೂಡ ನಿವೃತ್ತಿ ಆಗುತ್ತೇನೆ ಅಂತ ವಿನಂತಿ ಮಾಡಿಕೊಳ್ಳುತ್ತೇನೆ. ಅದು ಬಿಟ್ಟು ಏನೋ ಅವರ ಮನಸ್ಸಿಗೆ ಬಂತು, ಅವರ ನಾಲಿಗೆಯಲ್ಲಿ ಬಂತು ಎಂದು ಮಾತನಾಡಿದರೆ ಅದು ಸರಿಯಲ್ಲ. ಈ

(ಶ್ರೀ ವೀರೇಂದ್ರ ಪಾಟೀಲ್)

ಮಾನ್ಯ ಸಭೆಯಲ್ಲಿ ಒಂದು ಡೀಸೆನ್ಸಿ ಇಟ್ಟುಕೊಂಡು ಮಾತನಾಡಬೇಕು. ಅದು ಬಿಟ್ಟು, ಈ ಸಭೆಯಲ್ಲಿ ಒಬ್ಬರಮೇಲೆ ಇನ್ನೊಬ್ಬರು ಪುಣ್ಣನ್ನು ತೂರುವ ಹಾಗೆ ಕೆಲಸ ಮಾಡಬಾರದು ಎಂದು ಹೇಳುತ್ತೇನೆ.

ಶ್ರೀ ಎಸ್. ಚನ್ನಯ್ಯ:—ಪೋಲೀಸ್ ಡಿಪಾರ್ಟ್‌ಮೆಂಟ್ ಇವರ ಕೈಯಲ್ಲಿ ಇಟ್ಟುಕೊಂಡಿರುವುದು, ಇವರಿಗೆ ಬೇಕಾದಂಥ ಇನ್‌ಫರ್ಮೇಷನ್ನನ್ನು ತಿಳಿದುಕೊಂಡು ಸದಸ್ಯರನ್ನೆಲ್ಲಾ ಹೆದರಿಸುವುದಕ್ಕೆ ಆದುದರಿಂದ ಪೋಲೀಸ್ ಡಿಪಾರ್ಟ್‌ಮೆಂಟ್ ಇವರ ಕೈಯಲ್ಲಿ ಇರಬಾರದು ಎಂದು ಹೇಳುತ್ತೇನೆ.

ಶ್ರೀ ಆರ್. ದಯಾನಂದಸಾಗರ್:—(ಮುಖ್ಯಮಂತ್ರಿಯನ್ನುದ್ದೇಶಿಸಿ) ಅವರಿಗೆ ನಾನು ಚಾಲೆಂಜ್ ಕೊಡುತ್ತಾ ಇದ್ದೇನೆ. ನಾನು ಅವರನ್ನು ನೋಡಿಕೊಳ್ಳುತ್ತೇನೆ. ರಾಜ್ಯದ ಮೈಖರಿ ಏನೆಂಬುದನ್ನೂ ನೋಡಿಕೊಳ್ಳುತ್ತೇನೆ.

ಶ್ರೀ ಕೆ.ಎಂ. ಪುಟ್ಟಸ್ವಾಮಿ:—ನೀವು ನೋಡಿಕೊಳ್ಳುತ್ತೇನೆ ಎಂದರೆ, ಏನು ನೋಡಿಕೊಳ್ಳುತ್ತೀರಿ?

ಶ್ರೀ ಆರ್. ದಯಾನಂದಸಾಗರ್: — ಇನ್ನೂ ಒಂದು ಸಾರಿ ಹೇಳುತ್ತೇನೆ. ಅವರನ್ನು ನೋಡಿಕೊಳ್ಳುತ್ತೇನೆ.

---

* * * *

* Not recorded as directed by the Speaker.

ಶ್ರೀ ವೀರೇಂದ್ರ ಪಾಟೀಲ್:—ಅಧ್ಯಕ್ಷರೇ, ಈ ಮಾನ್ಯ ಸಭೆಗೆ ಕಳಕಳಿಯಿಂದ ನಾನು ಮತ್ತೊಮ್ಮೆ ನಿವೇದಿಸಿಕೊಳ್ಳುತ್ತೇನೆ. ಮನುಷ್ಯನಿಗೆ ಎಲ್ಲದಕ್ಕೂ ಪ್ರಿಯವಾದ ವಸ್ತು ಸೆಲ್ಫ್ ರೆಸ್ಪೆಕ್ಟ್. ಒಬ್ಬ ಎಲ್ಲವನ್ನೂ ಸಹಿಸಿಕೊಳ್ಳಬಹುದು. ಆದರೆ ಅವನ ಸ್ವಾಭಿಮಾನಕ್ಕೆ ಧಕ್ಕೆ ಬಂದರೆ ಅದನ್ನು ಸಹಿಸುವುದಕ್ಕೆ ಸಾಧ್ಯ ಇಲ್ಲ. ಆದಕ್ಕಾಗಿ ಈ ವಿಚಾರಗಳನ್ನು ಹೇಳಬೇಕಾಯಿತು. ಯಾರಮೇಲೂ ಥ್ರೆಟುಮಾಡುತ್ತಾ ಇಲ್ಲ. ಹಿಟ್ಲರ್‌ಷಾಹಿ ಎಂದು ನನ್ನ ಮೇಲೆ ಒಂದು ಆರೋಪ ಬಂದಿದ್ದರಿಂದ ಆದರಿಂದ ವಿಮುಕ್ತನಾಗಬೇಕಾಗಿದೆ. ಇಲ್ಲದಿದ್ದರೆ ಆರೋಪವನ್ನು ವಾಪಸ್ಸು ತೆಗೆದುಕೊಳ್ಳಬೇಕು. ಅದನ್ನು ಕೇಳುವ ಹಕ್ಕು ಇಲ್ಲ ಎಂದರೆ ಬಹುಶಃ ಈ ಪ್ರಜಾರಾಜ್ಯದಲ್ಲಿ ನಮಗೆ ಏನು ಹಕ್ಕು ಉಳಿದುಹೋಗುತ್ತದೋ ನನಗೆ ಗೊತ್ತಾಗುವುದಿಲ್ಲ.

ಇವೊತ್ತು ಅನೇಕ ವಿರೋಧ ಪಕ್ಷದ ಮಾನ್ಯ ಸದಸ್ಯರು ಇಲ್ಲಿ ಮಾತನಾಡುವುದನ್ನು ನೋಡಿದರೆ ಏನು ಅನಿಸುತ್ತದೆ ಎಂದರೆ ಅವರ ಮನಸ್ಸಿನಲ್ಲಿ ಯಾವುದೇ ವಿಚಾರ ಬರಲಿ. we have every right to beat you but you have no right to cry.

ಈ ಒಂದು ವಿಚಾರ ಇರುವ ಹಾಗೆ ಕಾಣುತ್ತದೆ.

(Interruptions)

Mr. Speaker:—When a member speaks the entire House should bear, if anything is to be said, I will permit it afterwords.

ಶ್ರೀ ವೀರೇಂದ್ರ ಪಾಟೀಲ್:—ಬಹುಶಃ ನಾನು ಇಲ್ಲಿ ಏನು ವಿಚಾರ ಹೇಳಬೇಕೆಂದು ಇದ್ದೇನೋ ಅದನ್ನು ಅವರಿಗೆ ಕೇಳುವ ಇಚ್ಛೆ ಇಲ್ಲ ಎಂದು ತೋರುತ್ತೆ. ನನ್ನ ಮೇಲೆ ಶ್ರೀ ಹುಚ್ಚಮಾಸ್ತಿಗೌಡರು ನಿನ್ನೆ ಇಲ್ಲಿ ಅಪಾದನೆ ಮಾಡಿ ಹೇಳಿದರು. ಅದರ ಬಗ್ಗೆ ನಾನು ಹೇಳುವ ಮಾತನ್ನು ಕೇಳುವುದಕ್ಕೆ ಸಾಧ್ಯವಿಲ್ಲ ಎಂದರೆ ಹೇಗೆ? ಶ್ರೀ ಸಿದ್ದವೀರಪ್ಪನವರು ಅವರ ಪಕ್ಷದ ನಾಯಕರಾಗಿರುವುದರಿಂದ ಅವರಲ್ಲಿ ಕಳಕಳಿಯಿಂದ ನಾನು ಇಲ್ಲಿ ವಿನಂತಿ ಮಾಡುವುದು ಇಲ್ಲಿ ಇಂತಹ ಪ್ರಿಸಿಡೆಂಟ್ಸ್‌ಗಳನ್ನು ತರಬಾರದು. ಏನಾದರೂ ಇದರ ಬಗ್ಗೆ ಅಂಕೆ ಸಂಖ್ಯೆಗಳಿದ್ದರೆ, ಇದನ್ನು ಪ್ರೂವ್ ಮಾಡಿ ನಿರಪರಾಧಿ ಎಂದು ಹೇಳಬೇಕಾದರೆ ಇದಕ್ಕೆ

ಯಾವುದಾದರೂ ಪೋರಂ ಬೇಕು. ಆದರೆ ಇಲ್ಲಿ ನಿರಪರಾಧಿ ಎನ್ನುವುದನ್ನು ಪ್ರೂವ್ ಮಾಡುವುದಕ್ಕೆ ಇಲ್ಲಿ ಆಗುವುದಿಲ್ಲ. ಇದರ ಬಗ್ಗೆ ವಕೀಲರುಗಳನ್ನು ಕೇಳಿದರೆ ಯಾವ ರೀತಿ ಮಾಡಬಹುದಾ ಎನ್ನುವುದನ್ನು ಹೇಳುತ್ತಾರೆ. ಶ್ರೀ ಹುಚ್ಚಮಾಸ್ತಿಗೌಡರಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದು ಮತ್ತು ಅವರ ನಾಯಕರ ಮೂಲಕ ವಿನಂತಿ ಮಾಡುವುದು ಏನೆಂದರೆ ಇಂತಹ ವಿಚಾರಗಳನ್ನು ಈ ಸಭೆಯಿಂದ ಹೊರಗಡೆ ಹೇಳಿದರೆ ನನಗೂ ಇದರಿಂದ ಒಂದು ಅವಕಾಶ ಸಿಗುತ್ತದೆ. ಆಗ ಇದರ ಬಗ್ಗೆ ಕೋರ್ಟಿನಲ್ಲಿ ಹೋಗಬಹುದು. ಅಲ್ಲಿ ನಮ್ಮ ಕೇಸನ್ನು ಪ್ರೂವ್ ಮಾಡಲು ಒಂದು ಅವಕಾಶ ಸಿಗುತ್ತದೆ. ಕೋರ್ಟಿನವರು ಇದರ ಬಗ್ಗೆ ಏನು ತೀರ್ಮಾನ ಕೊಡುತ್ತಾರೋ ಆದರಂತೆ ಇಬ್ಬರೂ ಬಾಧ್ಯರಾಗಲು ಸಾಧ್ಯವಾಗುತ್ತದೆ. ಆಲ್ಲಿಂದ ಶ್ರೀಮಾ ರಾಮಕೃಷ್ಣ ಹೆಗ್ಗಡೆಯವರ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಿದರು. ನಾನು ಅವರ ಪರವಾಗಿ ಅವರೇ ಇಲ್ಲಿ ಹೇಳಬಹುದು ಎಂದು ತಿಳಿಸಿದ್ದೇನೆ. ಮುಂದೆ ಇಲ್ಲಿ ಅವರು ತಿಳಿಸಬಹುದು. ಇನ್ನು ಒಂದು ಮಾತನ್ನು ಮಾನ್ಯ ಸದಸ್ಯರಾದ ಶ್ರೀಮಾ ಚೆನ್ನಯ್ಯನವರು ನನಗೆ ಹೇಳಿದರು, ನನ್ನಲ್ಲಿರುವ ಹೋಂ ಪೋರ್ಟ್ಫೋಲಿಯೋ ತೆಗೆಯಬೇಕು ಎಂದು. ಅವರು ಯಾರಿಗೆ ಹೇಳುತ್ತಾರೋ ಗೊತ್ತಿಲ್ಲ. ಪೋರ್ಟ್ಫೋಲಿಯೋಗಳನ್ನು ಹಂಚುವವನೇ ನಾನು. ಮತ್ತು ಮುಖ್ಯಮಂತ್ರಿಯಾಗಿರುವವರೇ ಇಂತಹ ಹಂಚಿಕೆ ಮಾಡುವುದು. ನನಗೆ ಶಕ್ತಿ ಇಲ್ಲ ಎಂದು ಇವರು ಹೇಳಿದರೆ ಇದನ್ನು ಯಾರಿಗೆ ಒಪ್ಪಿಸಬೇಕು? ಅವರೇನಾದರೂ ಮುಂದೆ ಬಂದಾಗ ಈ ರೀತಿ ಹೇಳಬಹುದು.

ಶ್ರೀ ಡಿ. ದಯಾನಂದಸಾಗರ್:—ನಮ್ಮ ಹತ್ತಿರ ಶಕ್ತಿ ಇದೆ.

ಶ್ರೀ ಎಸ್. ಚೆನ್ನಯ್ಯ:—ಶಕ್ತಿ ಬರಲು ಏನೇನು ಬೇಕೋ ಅದನ್ನು ಮಾಡುತ್ತಿದ್ದೇವೆ.

ಶ್ರೀ ವೀರೇಂದ್ರ ಪಾಟೀಲ್:—ನನ್ನನ್ನು ಇಲ್ಲಿ ನಾಯಕನನ್ನಾಗಿ ಆರಿಸಿರುವುದು ನಮ್ಮ ಪಕ್ಷದವರು. ನಮ್ಮ ಪಕ್ಷದವರ ಬೆಂಬಲದಿಂದಲೇ ಇಲ್ಲಿ ಬಂದಿರುವುದು. ತಮ್ಮ ಬೆಂಬಲದಿಂದ ನಾನು ಇಲ್ಲಿ ಬಂದಿದ್ದೇನೆ ಎಂದು ಎಂದಿಗೂ ತಿಳಿದುಕೊಂಡಿಲ್ಲ. ಈ ಸಂದರ್ಭದಲ್ಲಿ ನಮ್ಮ ಮೇಲೆ ಇಲ್ಲದ ಗೊಂದಲ ಉಂಟುಮಾಡುವುದು ಅಷ್ಟು ಉಚಿತವಲ್ಲ. ಸುಮ್ಮನೆ ಒಬ್ಬರಮೇಲೊಬ್ಬರು ಈ ರೀತಿ ಆರೋಪಣೆಗಳನ್ನು ಸರಕಾರದ ಮೇಲೆ ಮಾಡಿ ದೇಶದಲ್ಲಿ ಸಾಕಷ್ಟು ಗೊಂದಲ ಉಂಟುಮಾಡುವುದು ಸರಿಯಲ್ಲ. ಇದನ್ನು ಇನ್ನೂ ಹೆಚ್ಚು ಗೊಂದಲಮಯ ವಾಗಿ ಮಾಡಲು ಇಲ್ಲಿ ರಾಜಕೀಯ ಮಾಡಲು ದುಡ್ಡು ಹೊಡ್ಡೆಯುವ ಜನ ಇಲ್ಲದ್ದಾರೆ ಎಂದು ಹೇಳಲು ಏನು ಕಾರಣವೋ ಗೊತ್ತಿಲ್ಲ. ಇಂತಹ ಮಾತುಗಳನ್ನು ಹೇಳುವುದರಿಂದ ಯಾರಿಗೂ ಗೌರವ ಬರುವುದಿಲ್ಲ ಎಂದು ಇಲ್ಲಿ ಕಳಕಳಿಯಿಂದ ಇಲ್ಲಿ ಹೇಳುತ್ತೇನೆ.

[Sri H. SIDDAVEERAPPA:—*Rose.*]

Mr. SPEAKER:—I permit the leader of Congress (R) to speak.

ಶ್ರೀ ಕೆ.ಎಂ. ಪುಟ್ಟಸ್ವಾಮಿ:—ನನ್ನದೊಂದು ಪಾಯಿಂಟ್ ಆರ್ಡರು ರೂಲು ೧೧೨ರಂತೆ ಇವೆ.

ಸ್ವಾಮೀ ಚೀಫ್ ಮಿನಿಸ್ಟರು ಸ್ಟೇಟ್‌ಮೆಂಟು ಕೊಡಲು ಅವಕಾಶ ಕೊಟ್ಟ ಮೇಲೆ ಇದರಂತೆ ಇತರರಿಗೆ ಮಾತನಾಡಲು ಅವಕಾಶ ಕೊಟ್ಟರೆ ನಮಗೂ ಅವಕಾಶ ಕೊಡಬೇಕಾಗುತ್ತದೆ. ಇಲ್ಲದೇ ಇದ್ದರೆ ಯಾರಿಗೂ ಇಲ್ಲಿ ಮಾತಾಡಲು ಅವಕಾಶ ಕೊಡಕೂಡದು.

ಅಧ್ಯಕ್ಷರು:—ಪರ್ಸನಲ್ ಎಕ್ಸ್‌ಪ್ಲನೇಷ್ ಕೊಡಲು ನಾನು ಅನುಮತಿ ನೀಡಿದ್ದೇನೆ.

ri D.M. SIDDIAH:—Sir, Sri Huchmasthy Gowda has made allegations against the Chief Minister. The Chief Minister made a reply. If anything is to be made in reply, Sri Huchmasthy Gowda has to make. I fail to understand why Sri Siddaveerappa is trying to say something on behalf of Sri Huchmasty Gowda, as if Sri Huchmasthy Gowda is not competent to do so.

Sri H. SIDDAVEERAPPA:—I will say something on some particular points.

Sri M.N. RAMANNA:—It is not correct to permit Sri Siddaveerappa to say something. I want a ruling on this.

Mr. SPEAKER:—I permit Sri Siddaveerappa to offer explanation on behalf of Sri Huchmasthy Gowda.

ಶ್ರೀ ಎಸ್. ವಿ. ಅಗ್ನಿಹೋತ್ರಿ:—ಮುಖ್ಯಮಂತ್ರಿಗಳ ಮೇಲೆ ಆಪಾದನೆ ಮಾಡಿರುವುದು ಶ್ರೀ ಹುಚ್ಚಮಾಸ್ತಿಗೌಡರು. ಆದ್ದರಿಂದ ತಾವು ದಯವಿಟ್ಟು ಮೊದಲು ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟು ನಂತರ ಬೇಕಾದರೆ ಶ್ರೀಮಾನ್ ಸಿದ್ದವೀರಪ್ಪನವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:—ನಾನು ಶ್ರೀ ಸಿದ್ಧವೀರಪ್ಪನವರಿಗೆ ಮಾತನಾಡುವುದಕ್ಕೆ ಪರ್ಮಿಷ್ಷನ್ ಕೊಟ್ಟಿದ್ದೇನೆ.

Sri H. SIDDAVEERAPPA:—The Hon. Leader of the House referred to me something.

ಶ್ರೀ ಎಂ.ಎನ್. ರಾಮಣ್ಣ:—ಸಾಧ್ಯವಿಲ್ಲ. ಶ್ರೀ ಹುಚ್ಚಮಾಸ್ತಿಗೌಡರೇ ಮಾತನಾಡಬೇಕು.

Sri AZIZ SAIT:—Can any Hon. Member question the ruling of the Chair? I do not know how the Chair is tolerating the members of the Ruling Party.

MR SPEAKER:—When I am tolerating Sri Aziz Sait it is not difficult for me to tolerate others.

(Some Hon. Members were shouting).

MR. SPEAKER:—I adjourn the House for about half an hour.

The House rose at Twenty-five Minutes past Ten of the Clock and reassembled at fifty Five Minutes past Ten of the Clock.

(Mr. SPEAKER in the Chair).—

MR. SPEAKER —I hope the tempers have calmed down so that we may proceed with the work in the House in a orderly manner.

Sri M. RAMAPPA:—I rise to speak on the point of order. Sir, But if the Chair revises its previous stand and Sri Siddaveerappa is not permitted to speak then I will not speak. I would like to know if the Chair permits Sri Siddaveerappa to speak ?

MR SPEAKER:—I have already permitted him.

Sri M. RAMAPPA:—I would like to submit that there is no prohibition under the rules for the Speaker to revise his stand or decision. In this case, we cannot call it a ruling. I would submit that this is not a matter of public importance to be debated in the House It is purely a question of personal explanation relating to an Hon, Member of the House. Even on the side of our Party, no Member has raised any discussion on this. Since it related to the Chief Minister personally and not by designation, it was for him to explain his position. Sri N. Hutchmasthy Gowda made a charge personally against the Chief Minister by name and the Chief Minister in turn has suggested a procedure to be adopted for absolving himself from such an allegation Now it is open to Sri Hutchmasthi Gowda to say what he proposes now to do. Even that as a matter of fact, strictly speaking, is not permissible. But it is clearly beyond the rule to permit Sri Siddaveerappa to intervene, as a leader of a party and if he is permitted, it will be giving scope for a debate. It would be wrong to permit a debate on this subject because it is not a matter of public importance. Therefore I request you not to permit Sri Siddaveerappa to speak and I also go one step further and request Mr. Siddaveerappa also not to press his claim to intervene on this matter, as otherwise, it will open the floodgates of a debate and controversy.

MR. SPEAKER:—I think the Hon'ble Member could trust that the Speaker has atleast the ordinary intelligence to understand things when they are empressed briefly The Hon. Member need not have taken such a long time to explain the point of order.

Now rule 293 reads :

> " 293 : A member may, with the permission of the Speaker make a personal explanation although there is no question before the Assembly, but in this case no debatable matter may be brought forward, and no debate shall arise."

Therefore, it is the clear intention of the rule that there should not be any debate on this. It did not require so much time for the Hon. Member to remind the Chair about it. I have already held that these are not controversial matters and there should be no debate.

The reason why I permitted Sri Siddaveerappa is that the Chief Minister chose to address Sri Siddaveerappa and through him Sri Huchmasthy Gowda that we should set up a high standard. When that address was made by the Chief Minister and Leader of the House Sri Veerendra Patil to Sri Siddaveerappa to see that a high standard is set up and the debate is properly conducted, then I called upon Sri Siddaveerappa to give his reactions to what the Chief Minister has said and nothing beyond that. It was not because I wanted to raise a controversy or allow any debate. It was only in that spirit that I permitted Sri Siddaveerappa to speak and not for any other purpose.

(MR. SPEAKER)

11-00 A.M.

If the Hon. Member Sri Hutchmasthy Gowda wants to give an explanation that is understandable. If he wants to make a personal explanation, I can permit him after Sri Siddaveerappa finishes speach.

SRI D. M. SIDDAIAH:—On a point of order Sir.

SRI H. N. NANJE GOWDA:—On a point of order, Sir.

SRI D. M. SIDDIAH:—I stocd up first. I should be allowed first to raise my point of order.

My point of order is that the right of personal explanation is only for the member concerned. You may give a chance for personal explanation to Sri Hutchmasthy Gowda, but if you give chance to Sri Siddaveerappa, then I shou'd also be given a chance to speak.

MR. SPEAKER:—If it is the desire of the House that I should not allow Sri Siddaveerappa to speak, then I will request Sri Siddaveerappa not to speak.

ಶ್ರೀ ಡಿ. ಎಂ. ಸಿದ್ದಯ್ಯ:—ಮಾನ್ಯ ಮುಖ್ಯ ಮಂತ್ರಿಗಳೇ ಅವರ ಮೇಲೆ ಶ್ರೀಮಾನ್ ಹುಚ್ಚ ಮಾಸ್ತಿಗೌಡರು ಮಾಡಿದ ಆಪಾದನೆ ವಿಷಯದಲ್ಲಿ ಸಭೆಗೆ ಮನವಿ ಮಾಡಿಕೊಳ್ಳುವ ಕಾಲದಲ್ಲಿ ಮಾನ್ಯ ಹುಚ್ಚಮಾಸ್ತಿಗೌಡರು ಎದ್ದು ಇಂಟರ್‌ಫಿಯರ್ ಮಾಡಿ ಏನೋ ಎಲ್ಲಿಯೋ ಸಮಾಚಾರ ಕೇಳಿದೆ ಎಂದು ಹೇಳುವುದಕ್ಕೆ ಪ್ರಯತ್ನಪಟ್ಟರು. ಅವರ ಮಾತಿನಿಂದ ನಾವು ಊಹಿಸತಕ್ಕುದು ಏನೆಂದರೆ ಅದು ಡೈರಕ್ಟ್ ಎಲಿಗೇಷನ್ ಅಲ್ಲ, ಸುದ್ದಿ ಮಾತನಾಡುವುದಕ್ಕೆ ಪ್ರಯತ್ನಪಟ್ಟರು. ಮುಖ್ಯ ಮಂತ್ರಿಗಳು ಅವರ ಮಾತು ಮುಗಿಸದೆ ಕೂತರು. ಆದ್ದರಿಂದ ಮುಖ್ಯ ಮಂತ್ರಿಗಳು ತಮ್ಮ ಉತ್ತರಕೊಟ್ಟ ಮೇಲೆ ಏನಾದರೂ ಹೇಳುವುದಿದ್ದರೆ ಹುಚ್ಚ ಮಾಸ್ತಿಗೌಡರು ಹೇಳಲಿ. ಅವರು ಹೇಳಿದ ಮೇಲೂ ಕೂಡ ತಾವು ವಿವೇಚನೆ ಉಪಯೋಗಿಸಿ ಅವರ ಪಕ್ಷದ ನಾಯಕರು ಏನಾದರೂ ಹೇಳುವುದಿದ್ದರೆ, ಹೇಳಬೇಕು ಎಂದರೆ ಅದು ತಮಗೆ ಬಿಟ್ಟದ್ದು. ಶ್ರೀಮಾನ್ ಹುಚ್ಚಮಾಸ್ತಿಗೌಡರು ವಿರೇಂದ್ರಪಾಟೀಲರ ಮೇಲೆ ವೈಯುಕ್ತಿಕವಾಗಿ ಮಾಡಿದ ಆಕ್ಷೇಪಣೆ ಹೊರತು ಮುಖ್ಯ ಮಂತ್ರಿಗಳ ಮೇಲೆ ಆಕ್ಷೇಪಣೆ ಮಾತಿಲ್ಲ. ಅದು ಅವರ ಪಕ್ಷಕ್ಕೆ ಸಂಬಂಧಪಟ್ಟ ಪ್ರಶ್ನೆ ಅಲ್ಲ. ಆದುದರಿಂದ ಹುಚ್ಚಮಾಸ್ತಿಗೌಡರು ಮಾತನಾಡುವುದು ಸೂಕ್ತವೇ ಹೊರತು ಬೇರೆಯವರು ಮಾತನಾಡುವುದಕ್ಕೆ ಹೋದರೆ ಚರ್ಚೆಗೆ ಅವಕಾಶವಾಗುತ್ತದೆ. ಎಂದು ವೇಳೆ ಚರ್ಚೆಗೆ ಅವಕಾಶ ಬೇಕು ಎಂದು ಹೇಳಿದರೆ ಚರ್ಚಿಸಲಿ. ಚರ್ಚೆಗೆ ಅವಕಾಶ ಕೊಡಕೂಡದು ಎಂದರೆ ಇಲ್ಲಿಗೇ ಮುಕ್ತಾಯಮಾಡಬಹುದು.

† ಶ್ರೀ ಎಚ್. ಸಿದ್ಧವೀರಪ್ಪ: ಈಗ ತಾವು ತಾವಾಗಿಯೇ ವಿವೇಚನೆ ಉಪಯೋಗಿಸಿ ನನಗೆ ಅವಕಾಶ ಕೊಟ್ಟಿರಿ. ತಮ್ಮ ರೂಲಿಂಗ್‌ನ್ನು ಪದೇ ಪದೇ ಶ್ರೀಮಾನ್ಯ ಸದಸ್ಯರು ಪ್ರಶ್ನೆ ಮಾಡತಕ್ಕದ್ದು ಸರಿಯೇ ಎಂದು ಅವರೇ ಯೋಚನೆ ಮಾಡಲಿ.

SRI H. N. NANJE GOWDA (Arkalgud):—I want to bring to your notice Rules 288 (2) and (7) :

" A member while speaking shall not—

(ii) make a personal charge against any member ;

(vii) utter treasonable, seditious or defamatory words.

ಮುಖ್ಯ ಮಂತ್ರಿಗಳಿಗೆ ರೂಲ್ ೨೯೩ ಪ್ರಕಾರ ಪರ್‌ಸನಲ್ ಎಕ್ಸ್‌ಪ್ಲನೇಷನ್ ಕೊಡುವುದಕ್ಕೆ ಅವಕಾಶ ಕೊಟ್ಟಿರಿ. ಅವರು ಮಾತನಾಡುತ್ತಾ ನನ್ನ ಮೇಲೆ ರಾಜಕೀಯ ಮಾಡಬೇಡಿ ಎಂದು ಹೇಳಿ ರೂಲ್ ವಯಲೇಟ್ ಮಾಡಿ ಮಾತನಾಡಿದರು. ಅದು ಡಿಬೇಟಬಲ್ ಮ್ಯಾಟರ್ ಆಯಿತು. ಆದುರಿಂದ ಡಿಬೇಟ್ ಮಾಡುವುದಕ್ಕೆ ತಾವು ಅವಕಾಶ ಮಾಡಿ ಕೊಡಬೇಕು. ಮತ್ತು ಎಲ್ಲಾ ಸದಸ್ಯರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಡಿಬೇಟಬಲ್ ಮ್ಯಾಟರ್‌ನ್ನು ಅವರು ತಮ್ಮ ಪರ್ಸನಲ್ ಸ್ಟೇಟ್‌ಮೆಂಟಿನಲ್ಲಿ ಸೇರಿಸಿರುವುದರಿಂದ ಡಿಬೇಟಿಗೆ ಅವಕಾಶ ಮಾಡಿ ಕೊಡಬೇಕು.

† ಶ್ರೀ ಕೆ. ಪ್ರಭಾಕರ್ (ವರ್ತೂರು):—ನಾನು ಮೊದಲಲ್ಲೇ ತಿಳಿಸಿದೆ. ಹೀಗೆ ಅಂತೆ ಕಂತೆ ಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬಾರದಾಗಿತ್ತು ಮತ್ತು ಊಹೆ ಮೇಲೆ ಮಾತನಾಡುವುದಕ್ಕೆ ಪ್ರಯತ್ನ ಮಾಡಬಾರದಾಗಿತ್ತು ಎಂಬುದಾಗಿ. ಎರಡನೆಯ ಪಾಯಿಂಟ್ ಎಂದರೆ ಮುಖ್ಯ ಮಂತ್ರಿಗಳು ಅದು ನಿಜವಲ್ಲ ಎಂದು ಹೇಳಿದ್ದರೆ ಸಾಕಾಗಿತ್ತು. ಈ ವಿಷಯ ಹರಾಜು ಹಾಕುವ ಮಟ್ಟಕ್ಕೆ ಹೋಗಬಾರದಾಗಿತ್ತು.

ಮೂರನೆಯ ಪಾಯಿಂಟ್ ಎಂದರೆ, ತಮ್ಮ ವಿಷಯದಲ್ಲಿ ಏನೇನು ಆಪಾದನೆಗಳು ಬಂದಿದೆಯೋ ಅದೇ ರೀತಿಯ ಆಪಾದನೆಗಳು ಬೇರೆ ಮಂತ್ರಿಗಳ ವಿಷಯದಲ್ಲೂ ಬಂದರೆ ಆದನ್ನೂ ಕೂಡ ವಿಚಾರ ಮಾಡುತ್ತೇನೆ ಎಂದು ಅವರು ಸಭೆಗೆ ಅಷ್ಯೂರೆನ್ಸ್ ಕೊಡಬೇಕು. ನಾಲ್ಕನೆಯ ಪಾಯಿಂಟು ಎಂದರೆ ಪೋಲೀಸ್ ಖಾತೆಯನ್ನು ಮುಖ್ಯಮಂತ್ರಿಗಳು ಇಟ್ಟುಕೊಂಡಿರುವುದು ಇದಕ್ಕೇನೆ ಅಂತ ಒಬ್ಬ ಸದಸ್ಯರು ಕೇಳಿದಾಗ, ಈ ಖಾತೆಯನ್ನು ಇಟ್ಟುಕೊಳ್ಳುವುದಕ್ಕೆ ನನಗೆ ಅಧಿಕಾರ ಇದೆ, ಖಾತೆ ಹಂಚುವವನು ನಾನು, ಖಾತೆ ಇಟ್ಟುಕೊಳ್ಳುವವನು ನಾನು, ನೀವು ಯಾರು ಅದನ್ನು ಕೇಳುವುದಕ್ಕೆ ಎಂದು ಹೇಳಿದರು. ಇದು ಒಂದು ಬಹಳ ವಿವಾದಾಸ್ಪದವಾದ ವಿಷಯ. ಈ ಬಗ್ಗೆ ತಾವು ರೂಲಿಂಗ್ ಕೊಡಬೇಕು.

ಶ್ರೀ ಎಚ್. ಡಿ. ದೇವೇಗೌಡ:—ಸ್ವಾಮಿ, ಶ್ರೀಮಾನ್ ಸಿದ್ದಯ್ಯನವರು ಹೇಳಿದ್ದನ್ನು ನಾನು ಪ್ರತಿಪಾದಿಸುತ್ತೇನೆ. ನನ್ನ ಒಂದು ಕ್ರಿಯಾಲೋಪವೇನೆಂದರೆ, ಶ್ರೀಮಾನ್ ಸಿದ್ದವೀರಪ್ಪನವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ, ಅದರ ಬಗ್ಗೆ ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಶ್ರೀಮಾನ್ ಹುಚ್ಚಮಾಸ್ತಿಗೌಡರು ಮೊದಲು ತಮ್ಮ ಅಭಿಪ್ರಾಯ ಹೇಳುವುದಕ್ಕೆ ಸಿದ್ಧವಾಗಿದ್ದರೆ ಅವರು ಹೇಳುವುದನ್ನು ನಾವು ಕೇಳೋಣ, ಇಲ್ಲದೇ ಇದ್ದರೆ ಅವರು ನಾಯಕರ ಮುಖೇನ ಅವರು ಹೇಳುವುದೇನಿದೆ ಎಂಬುದನ್ನು ಕೇಳುವುದಕ್ಕೆ ಅಡ್ಡಿ ಏನೂ ಇಲ್ಲ.

SRI H. M. CHANNABASAPPA (Periyapatna) :—With your kind permission, Sir, I would like to say a word. A very serious and essential point has come up for discussion before this House. I am very happy that the Hon. Chief Minister has made a statement that he has got the history of all the people here and he has the right to have it as Home Minister. I also had it when I was a Home Minister. Your goodself has permitted Sri Siddaveerappa to speak. I do not think it is within the competency of any Member of this House to question the ruling of the Chair.

SRI D. M. SIDDIAH:—On a point of order, Sir. Who is he to say that ?

SRI H. N. NANJE GOWDA:—When we question the ruling of the Chair, we are sent out. When Members on the other side question the ruling of the Chair, nothing of that sort is done. On the contrary they are even allowed to raise a point of order on the ruling of the Chair.

MR. SPEAKER:—I have heard the points of order and I shall give my ruling as to whether Sri Siddaveerappa should be permitted to speak or Sri Huchmasthe Gowda should be permitted to speak.

As regards the point of order raised by Sri Nanje Gowda that Rule 288 has been violated, I am sorry I am unable to uphold his point of order. I have heard everybody here and I never heard any challenge being thrown at anybody or any threat being given to anybody. All that was said was that the Members who speak must speak with a sense of responsibility. I don't think there can be any objection to it. There is no violation of Rule 288 as contended by the Hon. Member. I therefore cannot uphold his point of order,

Since the Chief Minister has made an appeal to Sri Siddaveerappa as the leader of the party of which Sri Huchmasthi Gowda is a Member, I called upon Sri Siddaveerappa to speak. There is nothing wrong if Sri Siddaveerappa speaks first or Sri Huchmasthe Gowda speaks first. Even if the Chair commits an error it should be accepted and should not be challenged. If Sri Siddaveerappa permits Sri Huchmasthi Gowda to speak first, I have no objection. I am only making an appeal to Sri Siddaveerappa.

SRI M. RAMAPPA:—Shall we take it that Sri Hutchamasthi Gowda does not speak ?

SRI H. SIDDAVEERAPPA:—I am really sorry... ...

ಶ್ರೀ ಎಸ್. ವಿ. ಅಗ್ನಿಹೋತ್ರಿ:—ಹುಚ್ಚುಮಾಸ್ತಿಗೌಡರಂ ಧೈರ್ಯಕ್ಕೆ ಹೆಸರಾದವರು. ಈ ದಿವಸ ಅವರೇಕೆ ಸುಮ್ಮನೆ ಕುಳಿತಿದ್ದಾರೆ ?

SRI H. SIDDAVEERAPPA:—I would like to know from the Hon. Speaker which side of the House is co-oeprating with the Chair ?

MR. SPEAKER:—Sri Siddaveerappa may be please brief.

SRI H. SIDDAVEERAPPA:—In deference to your suggestion, I am requesting my Hon. friend to speak first and then I wish to say a few words.

SRI M. NAGAPPA (Raichur):—I am on a point of order. According to Rule 286, it is the function of the Speaker to call the name of the Member who should speak. That is not the function of the Members. If the Speaker transfers that power to some other Members, I could also be given that power so that I can call any Member I like to speak next. The Speaker should specifically name the member who should speak next. He cannot say that either Sri Siddaveerappa or Sri Hutchamasty Gowda will speak; that will be against the Rule I quoted; Moreover,

there will be dereliction of duty by the Speaker. So, I request you to specifically call the name of the Member who should hold the floor next and not leave that discreation to another Member or Members.

MR. SPEAKER:—It is a good suggestion.

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ವೀರೇಂದ್ರ ಪಾಟೀಲರು ಈ ಸಭೆಯಲ್ಲಿ ಇಲ್ಲದೆ ಇದ್ದುದೇ... ...

SRI R. DAYANANDSAGAR (Chamarajapet):—The Hon. Chair permitted Sri Siddaveerappa, Hon. Leader of our Party, to speak. Now you have agreed that Sri Hutchnasthy Gowda may speak first if he so likes and then Sri Siddaveerappa to speak next Therefore, the Hon. Chair has committed itself to give a chance to Sri Siddaveerappa and the Hon. Chair's committal should be honoured.

MR. SPEAKER:—There is nothing new in it. I am very sorry that he has not followed the proceedings.

† ಶ್ರೀ ಎನ್. ಹುಚ್ಚಮಾಸ್ತಿಗೌಡ(ಹುಲಿಯೂರ್ದುರ್ಗ):—ಸ್ವಾಮಿ, ಮುಖ್ಯ ಮಂತ್ರಿಗಳು ನಾನು ಮಾತನಾಡುತ್ತಿದ್ದಾಗ ಈ ಸಭೆಯಲ್ಲಿದ್ದು ನಾನು ಹೇಳಿದ್ದನ್ನೆಲ್ಲಾ ಗಮನಿಸಿ ಕೇಳಿದ್ದರೆ ಚೆನ್ನಾಗಿತ್ತು. ಸಾಮಾನ್ಯವಾಗಿ ಈ ಸಭೆಯಲ್ಲಿ ಬೇಡಿಕೆಗಳ ಚರ್ಚೆಯಾಗುತ್ತಿದ್ದರೂ ಕೂಡ ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲಿರುವುದಿಲ್ಲ; ಟೀಕೆ ಟಿಪ್ಪಣಿ ಬರುವುದನ್ನು ಗಮನಕೊಟ್ಟು ಕೇಳುವುದಿಲ್ಲ. ಯಾರ ಬೇಡಿಕೆ ಸಭೆಯಲ್ಲಿ ಚರ್ಚೆಯಾಗುವುದೋ ಅವರು ಅಂದರೆ ಸಂಬಂಧಪಟ್ಟ ಮಂತ್ರಿಗಳು ಇಲ್ಲಿದ್ದು ಕೇಳುವುದು ಒಳ್ಳೆಯದು ಎಂದು ನಿನ್ನೆ ದಿವಸ ತಾವು ಹೇಳಿದಿರಿ. ಆ ರೀತಿ ಇದ್ದು ಕೇಳಿದ್ದರೆ ಇಷ್ಟು ದೂರ ಈ ಒಂದು ವಿಷಯ ಬೆಳೆಯುತ್ತಿರಲಿಲ್ಲವೆಂದು ನಾನು ಭಾವಿಸುತ್ತೇನೆ. ನಾನು ಹೇಳಿದ ಸಂದರ್ಭ ಅವರಿಗೆ ಗೊತ್ತಿದೆಯೋ, ಇಲ್ಲವೋ; ಅಫಿಷಿಯಲ್ ಪ್ರೊಸೀಡಿಂಗ್ಸ್ ತೆಗೆದುನೋಡಿದರೆ ನಾನು ಹೇಳಿದ್ದು ಸ್ಪಷ್ಟವಾಗುವುದು. ನಾನು ಹೇಳಿದ್ದು ಇಷ್ಟೆ; ಇಡೀ ರಾಜ್ಯದಲ್ಲಿ ಮಾತ್ರವಲ್ಲ, ಇಡೀ ದೇದನಲ್ಲಿ ಸರಕಾರದ ಅಧಿಕಾರವರ್ಗದಲ್ಲಿರುವವರ ಮೇಲೆ ಲಂಚದ ಆಪಾದನೆ ಈ ದಿವಸ ಬರುತ್ತಿದೆ ಮತ್ತು ಖಾಸಗಿ ಮುಖಂಡರ ಮೇಲೆ ಹೆಚ್ಚಾಗಿ ಬರುತ್ತಿದೆ. ನಮ್ಮಲ್ಲಿ ಹಿಂದಿದ್ದ ಮುಖ್ಯ ಮಂತ್ರಿಗಳಮೇಲೆ ಆಪಾದನೆ ಇದೇ; ಈಗಿರುವ ಮುಖ್ಯ ಮಂತ್ರಿಗಳಮೇಲೆ ಮತ್ತು ಇನ್ನೂ ಅನೇಕ ಸದಸ್ಯರಮೇಲೆ ಆಪಾದನೆ ಇದೆ; ಉಪ-ಮಂತ್ರಿಗಳ ಮೇಲೂ ಆಪಾದನೆ ಇದೆ. ಹಣ ದುರುಪಯೋಗ ಮಾಡಿರುವ ಆಪಾದನೆಗಳು ಬೇಕಾದಷ್ಟು ಬರುತ್ತಿವೆ. ಮಂಗಳೂರಿನಲ್ಲಿರುವ ಮಲಬಾರ್ ಫರ್ಟಿಲೈಜರ್ಸ್‌ನಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರಿಗೆ ಇಂಟರೆಸ್ಟ್ ಇದೆ ಎಂದು ನನಗೆ ತಿಳಿದಿದೆ. ಆದರಲ್ಲಿ ಎಷ್ಟು ಭಾಗವಿದೆ ಎಂಬುದು ಗೊತ್ತಿಲ್ಲ. ಪೂನಾದಲ್ಲಿರುವ ಒಂದು ಕಂಪೆನಿ ವಿಚಾರ ಹೇಳಿದೆ, ಅದು ಭಾರತ್ ಫೋರ್ಜ್ ಲಿಮಿಟೆಡ್, ಅದರಲ್ಲಿ ಅವರ ಇಂಟರೆಸ್ಟ್ ಇದೇ, ಈ ದಿವಸ ಹೆಸರು ಹೇಳುತ್ತಿದ್ದೇನೆ. ಈ ರೀತಿಯಲ್ಲಿ ಇಂಥ ಗುರುತರವಾದ ಆಪಾದನೆ ಮಂತ್ರಿಮಂಡಲದ ಮೇಲೆ, ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುವವರಮೇಲೆ ಬರುತ್ತಿದೆ. ಆದುದರಿಂದ ಇದಕ್ಕೆ ಒಂದು ಪರಿಹಾರ ಕಂಡುಹಿಡಿದು ಆಪಾದಿತರು ಆಪಾದನೆಯಿಂದ ಮುಕ್ತರಾಗಲು ಅವಕಾಶವುಂಟುಮಾಡಿ ಕೊಟ್ಟು ಒಳ್ಳೆಯ ವಾತಾವರಣ ಉಂಟುಮಾಡಬೇಕು. ರಾಜ್ಯದಲ್ಲಿ ಹೀಗೆ ಮಾಡುವುದು ಅವಶ್ಯಕ. ಆ ರೀತಿಯ ವಾತಾವರಣ ಉಂಟುಮಾಡಲು ಲೋಕಪಾಲ, ಲೋಕಆಯುಕ್ತ ಇವರುಗಳ ನೇಮಕಕ್ಕೆ ಏಕೆ ಸರ್ಕಾರ ಒಪ್ಪಬಾರದು ? ಹಿಂದೆ ನಿಜೇಗೌಡರು ಪಬ್ಲಿಕ್ ಮೆನ್ ಎನ್‌ಕ್ವೈರೀಸ್ ಬಿಲ್ ಈ ಸಭೆ ಮುಂದೆ ತಂದಿದ್ದರು, ಅದನ್ನು ಒಪ್ಪಿ ಜಾರಿಗೆ ತರಬಹುದಾಗಿತ್ತು. ಸರಕಾರದವರು ಇದಕ್ಕಾಗಿ ಒಂದು ಕಾನೂನನ್ನು ತಂದು ಆ ಮೂಲಕ ಪ್ರತಿಯೊಬ್ಬರೂ ಅವರ ಮೇಲಿರುವ ಆಪಾದನೆಗಳಿಂದ ಮುಕ್ತರಾಗಲು ಅವಕಾಶ ಮಾಡಿದರೆ ಸಾರ್ವಜನಿಕ ಕ್ಷೇತ್ರಗಳಲ್ಲಿ ಕೆಲಸಮಾಡವವರಿಗೆ ಅನುಕೂಲವಾಗುವುದು. ಇಂಥ ಅವಕಾಶ ಕಲ್ಪಿಸಬೇಕು. ಇಂದು ಅಂಥ ಅವಕಾಶವಿಲ್ಲ ನೇರವಾದ ಆಪಾದನೆ ಮುಖ್ಯ ಮಂತ್ರಿಗಳಮೇಲಿದೆ, ಇತರರಮೇಲೂ ಇದೆ. ಆಪಾದನೆ ಹೊರಿಸಿದಾಗ ಅದರಿಂದ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಮುಕ್ತರಾಗುವುದಕ್ಕೆ ಏಕೆ ಸೂಕ್ತ ಕ್ರಮ ತೆಗೆದುಕೊಳ್ಳುವುದಿಲ್ಲ ? ಬೇಕಾದಷ್ಟು ಹೇಳುತ್ತಾರೆ. ಶರಾವತಿ ವಿಚಾರದಲ್ಲಿ ಹಿಂದೇ ಹೇಳಿದೆ. ಹೊರಗಡೆ ಒಳ್ಳೆಯ ತತ್ವ ಹೇಳುವುದು, ಆದರೆ ಮಾಡುವುದೇ ಬೇರೆ. ಇಂದು ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುವವರು, ಪಕ್ಷಗಳಲ್ಲಿರುವ ಮುಖಂಡರು ಯಾವ ಪಕ್ಷದಲ್ಲೇ ಇರಲಿ, ಅವರುಮೇಲೆ ಆಪಾದನೆಗಳು ಬಂದಾಗ ಅವರು ಮುಂದೆ ಬಂದು ತಪ್ಪಿತಸ್ಥರಲ್ಲದಿದ್ದರೆ ಅದನ್ನು ತೋರಿಸಿಕೊಡಬೇಕು. ಅದು ಸ್ಪಾ ಂಡರ್ಡ್ ಆಫ್ ಡೀಸೆನ್ಸಿ.

11-30 A.M.

ಈ ಸಭೆಯಲ್ಲಿ ಯಾವಾಗಲೂ ಬಹಳ ಸೌಜನ್ಯದಿಂದ ಮಾತನಾಡಬೇಕು, ಬಹಳ ನಯದಿಂದ ಮಾತ ನಾಡಬೇಕು ಎಂದು ಮುಖ್ಯಮಂತ್ರಿಗಳು ಹೇಳಿದರು ಅದನ್ನು ಒಪ್ಪಿಕೊಳ್ಳೋಣ. ಇದರ ಜೊತೆಗೆ ಇವರ ಹಿನ್ನೆಲೆಯಲ್ಲಿರತಕ್ಕ ಕಾರ್ಯವೂ ಕೂಡ ಅಷ್ಟೇ ಒಳ್ಳೆಯದಾಗಿರಬೇಕು. ಅನೇಕ ದೂರುಗಳು ಪ್ರತಿಯೊಬ್ಬರ ಮೇಲೂ ಬರುತ್ತಿವೆ ಎಂದು ಹೇಳಿದ್ದಾರೆ ಮತ್ತು ಯಾವತ್ತಿಗೂ ಹಸ್ತಕ್ಷೇಪ ಮಾಡುವುದಿಲ್ಲ ಎಂದು ಹೇಳಿದರು. ಆಗ ತಕ್ಷಣ ನಾನು ಹೇಳಿದೆ, ಹಸ್ತಕ್ಷೇಪ ಮಾಡುವುದಿಲ್ಲ ಎನ್ನುವುದನ್ನು ಸಭೆಯಲ್ಲಿ ಹೇಳುತ್ತೀರಿ, ಆದರೆ ಆಡಳಿತ ಪಕ್ಷದಲ್ಲಿರತಕ್ಕ ಪ್ರತಿಯೊಬ್ಬರೂ, ಸಾಮಾನ್ಯ ನಾಮಕರಣ ಸದಸ್ಯರೂ ಕೈ ಹಾಕಿ ಅಧಿಕಾರಿಗಳು ಸ್ವತಂತ್ರವಾಗಿ, ನ್ಯಾಯವಾಗಿ ರೂಲ್ಸ್ ಪ್ರಕಾರ ಕೆಲಸ ಮಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ ಎನ್ನುವುದನ್ನು ಈ ವಿಷಯ ಪ್ರತಿಯೊಬ್ಬರ ಅನುಭವಕ್ಕೆ ಬಂದಿದೆ ಯಾವ ವಿಷಯದಲ್ಲಿಯೂ ಕೈ ಹಾಕುವು ದಿಲ್ಲ, ಹಸ್ತಕ್ಷೇಪ ಮಾಡುವುದಿಲ್ಲ ಒಳ್ಳೆ ಗುಡ್ ಗೌರ್ನಮೆಂಟ್, ಎಫಿಷಿಯೆಂಟ್ ಗೌರ್ನಮೆಂಟ್ ಕೊಡುತ್ತೇನೆ ಎಂದು ಹೇಳಬಹುದು ಅಷ್ಟೆ. ಈ ದೃಷ್ಟಿಯಲ್ಲಿ ನಾನು ಹೇಳಿರುವುದನ್ನು ಅವರು ಗಮನಕ್ಕೆ ತೆಗೆದು ಕೊಂಡು ಅದರ ಮೇಲೆ ಏನಾದರೂ ಹೇಳುವುದಿದ್ದರೆ ಹೇಳಲಿ.

ಅವರು ಮಾತನಾಡುವಾಗ ಲಘುವಾಗಿ ಮಾತನಾಡುವುದಿಲ್ಲ ಎಂದು ಅನೇಕ ಪದಗಳನ್ನು ಉಪ ಯೋಗಿಸಿದರು. ಲಘುವಾಗಿ ಮಾತನಾಡಬೇಕು ಎಂದರೆ ಯಾರು ಒಪ್ಪತಕ್ಕವರು ಇಲ್ಲ. ಈ ಸಭೆಯ ಗೌರವ, ಘನತೆ, ಹೆಚ್ಚಾಗುವುದಕ್ಕೆ ನಾವೆಲ್ಲರೂ ಜವಾಬ್ದಾರಿಯುತರಾಗಿ ನಡೆದು ಕೊಳ್ಳಬೇಕು; ನಾನು ಬಹಳ ಜವಾಬ್ದಾರಿಯಿಂದ ಹೇಳಿಕೆಯನ್ನು ಮಾಡಿದ್ದೇನೆ. ಇಂಥ ದೂರು ಇದೆ, ಎಷ್ಟೆಷ್ಟು ಹಣ ಹಾಕಿದ್ದಾರೆ ಎನ್ನುವುದು ಗೊತ್ತಿಲ್ಲ, ಈ ಹಣ ಎಲ್ಲಿಂದ ಬಂತು? ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ನಮ್ಮ ನಮ್ಮ ಮಿತಿ ಏನು ಎಂಬುದು ಗೊತ್ತಿದೆ. ನಮ್ಮ ಆಸ್ತಿ ಎಷ್ಟು ಎಂದು ಕೂಡ ಕೇಳಿದ್ದೇನೆ. ನನ್ನ ಭಾಷಣದ ಪ್ರತಿಯನ್ನು ತೆಗೆದು ನೋಡಿದರೆ ಗೊತ್ತಾಗುತ್ತದೆ. ಸಾರ್ವಜನಿಕ ಕ್ಷೇತ್ರದಲ್ಲಿ ಕಾಲಿಡುವ ಮುಂಚೆ ಆಸ್ತಿ ಎಷ್ಟಿತ್ತು, ಬರತಕ್ಕ ವರಮಾನ ಎಷ್ಟು, ಅಧಿಕಾರದಿಂದ ನಿವೃತ್ತನಾಗುವಾಗ ಎಷ್ಟು ಆಸ್ತಿ ಇದೆ, ವರಮಾನ-ದಲ್ಲಿ ಖರ್ಚಾಗಿ ಉಳಿದಿರುವುದೆಷ್ಟು ಎನುವದನ್ನು ಲೆಕ್ಕ ಇಡಬೇಕು ಎಂದು ಹೇಳಿದ್ದೇನೆ. ಈ ಸಲಹೆಗಳನ್ನು ಮಾಡುವಾಗ ಇಂಥ ದೂರುಗಳಿವೆ ಈ ದೂರುಗಳನ್ನು ತಪ್ಪಿಸುವುದಕ್ಕೆ ವ್ಯವಸ್ಥೆಯಾಗಬೇಕೆಂದು ದೃಷ್ಟಿ ಯಿಂದ ಹೇಳಿದ್ದೇನೆ. ಈ ಹೊತ್ತೂ ಅದನ್ನು ಹೇಳುತ್ತಿದ್ದೇನೆ, ಇದಕ್ಕಿಂತ ಹೆಚ್ಚು ಹೇಳಬೇಕಾದಿಲ್ಲ ಎಂದು ನಾನು ಭಾವಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ):—ಅಧ್ಯಕ್ಷರೇ, ಈಗ ಮಾನ್ಯ ಸಭೆಯ ನಾಯಕರಾದ ಶ್ರೀ ವೀರೇಂದ್ರ ಪಾಟೀಲರು ಹೇಳಿದುದನ್ನು ಕೇಳಿದ್ದೇವೆ ಮತ್ತು ಶ್ರೀಮಾನ್ ಹುಚ್ಚಮಾಸ್ತಿಗೌಡರು, ಯಾರು ಆಪಾದನೆಯನ್ನು ಮಾಡಿದರು ಎಂದು ಹೇಳಿದ್ದನ್ನು ಸಹ ಕೇಳಿದ್ದೇವೆ ಅವರು ನಮ್ಮ ಪಕ್ಷಕ್ಕೆ ಸೇರಿದ ಸದಸ್ಯರಾಗಿದ್ದಾರೆ. ಈಗ ನಡೆಯುತ್ತಿರತಕ್ಕ ವಿಷಯ ಕೇವಲ ಶ್ರೀಮಾನ್ ವೀರೇಂದ್ರ ಪಾಟೀಲರು ಮತ್ತು ಮತ್ತು, ಶ್ರೀಮಾನ್ ಹುಚ್ಚಮಾಸ್ತಿಗೌಡರಿಗೆ ಸೇರಿದ್ದಲ್ಲ. ಆ ವಿಷಯ ಸಭೆಯ ಸ್ವತ್ತಾಗಿದೆ. ಆ ವಿಷಯ ಎಷ್ಟೊಂದು ತೀಕ್ಷ್ಣವಾಗಿದೆ ಎನ್ನುವದಕ್ಕೆ ಈಗ ನಾವು ತೆಗೆದುಕೊಂಡಿರುವ ಕಾಲವೇ ಸಾಕ್ಷಿ. ಈ ಕಾಲದಲ್ಲಿ ಇಷ್ಟೊಂದು ತುರುಸಿನ ಅಥವಾ ಬಿರುಸಾದ ಚರ್ಚೆ ಆಗಿರಬೇಕಾದರೆ ಈ ದೇಶದಲ್ಲಿ ಈ ವಿಚಾರದಲ್ಲಿ ಏನು ತೀವ್ರ ಇದೆ ಎನ್ನುವುದನ್ನು ಹೊರಪಡಿಸುತ್ತದೆ. 'ಈಚಲ ಮರದ ಕೆಳಗೆ ಕುಳಿತು ಮಜ್ಜಿಗೆ ಕುಡಿದರೆ..... "ಎಂಬಗಾದೆ ಹೇಳುತ್ತಾರಲ್ಲ ಹಾಗಾಗಬಾರದು, ಈ ಹೊತ್ತಿನ ದಿವಸ ಯಾರೇ ಅಧಿಕಾರ ಸ್ಥಾನದಲ್ಲಿರಲಿ, ಈ ಸಭೆಯ ಸದಸ್ಯರಾಗಿರಲಿ, ಪದೇ ಪದೇ ಈ ರೀತಿಯಾದ ಪ್ರಶ್ನೆ ಬರುತ್ತದೆ. ಒಂದು ಅಭಿಪ್ರಾಯ ಜನರಲ್ಲಿ ಏನು ಬರುತ್ತದೆ ಎಂದರೆ ಈ ಸಭೆಗೆ ಹೋಗತಕ್ಕವರು ಜೇಬನ್ನು ದೊಡ್ಡದು ಮಾಡಿಕೊಳ್ಳುವುದಕ್ಕೆ ಹೊಗು ತ್ತಾರೆ ಎನ್ನತಕ್ಕ ವಿಚಾರ ಸರ್ವೇ ಸಾಮಾನ್ಯವಾದ ಹೋಟೆಲುಗಳಿಗೆ ಹೋಗಲಿ, ಬಸ್ ಸ್ಟಾಂಡಿಗೆ ಹೋಗಲಿ ಕ್ಷೌರದಂಗಡಿಗೆ ಹೊಗಲಿ ಸಾಮಾನ್ಯ ಜನರು ಎಲ್ಲೆಲ್ಲಿ ಇರುತ್ತಾರೆ ಅಲ್ಲೆಲ್ಲ ಈಮಾತು ಬರುವುದನ್ನು ಕೇಳಿದ್ದೇವೆ

ಇದು ಪ್ರಜಾಪ್ರಭುತ್ವಕ್ಕೆ ಕುಠಾರ ಪ್ರಾಯವಾದುದು. ತಾವು ಇಂಗ್ಲೆಂಡಿಗೆ ಹೋಗಿ ಬಂದಿದ್ದೀರಿ, ಇಂಗ್ಲೆಂಡಿನ ಸಂಪ್ರದಾಯವನ್ನು ಪದೇ ಪದೇ ತಿಳಿಸುತ್ತಿರುತ್ತೀರಿ, ಇಂಗ್ಲೆಂಡಿನ ಸಂಪ್ರದಾಯವನ್ನು ತೆಗೆದುಕೊಂಡು ಅನೇಕ ಸಲ ಉದಾಹರಣೆಯನ್ನು ಸಹ ಕೊಟ್ಟಿದ್ದೇನೆ ಯಾರೋ ಒಬ್ಬ ಮಂತ್ರಿ ಒಂದು ಬೆಳ್ಳಿಯ ಸಿಗರೇಟ್ ಕೇಸನ್ನು ತೆಗೆದುಕೊಂಡಿದ್ದರಿಂದ ಮಂತ್ರಿ ಪದವಿಯನ್ನು ಕಳೆದುಕೊಂಡ ಕಾಲವಿದೆ. ಈ ಚರ್ಚೆ ಇಷ್ಟು ತೀಕ್ಷ್ಣವಾಗಿ ಈದೇಶದಲ್ಲಿ ನಡೆಯುತ್ತಿದೆ ಅದಕ್ಕಾಗಿ ಒಂದು ಸಲಹೆ ಮಾಡಿ ವಿನಯದಿಂದ ಕೇಳಿಕೊಂಡೆ. ಶ್ರೀಮಾನ್ ನಿಜಲಿಂಗಪ್ಪನವರು ಇದ್ದಾಗಲೂ ಕೇಳಿಕೊಂಡೆ. ಏನೆಂದರೆ ಮಂತ್ರಿಯಾಗಿ ಯಾರೂ ಖಾಯಂ ಆಗಿ ಇರುವುದಿಲ್ಲ, ಇದನ್ನೆಲ್ಲ ಒಂದು ದಿವಸ ಬಿಟ್ಟು ಹೋಗಬೇಕಾಗುತ್ತದೆ. ಸ್ಥಾನ ಪಲ್ಲಟವಾಗುತ್ತದೆ. ಆದ್ದರಿಂದ ನಾವು ಇನ್ನೂ ಬದುಕಿದ್ದಾಗಲೇ ಮಂತ್ರಿಗಳಾಗಿರಲಿ, ಮಾಜಿ ಮಂತ್ರಿಗಳಾಗಿರಲಿ, ಈ ಸಭೆಯಲ್ಲಿರಲಿ. ಇಲ್ಲದೆ ಇರಲಿ, ಸಾಯುವುದಕ್ಕಿಂತ ಮುಂಚೆ ನಾವು ಪರಲೋಕಕ್ಕೆ ಹೋಗುವುದಕ್ಕೆ ಒಂದು ಪಾಸ್ ಪೋರ್ಟ್ ಕೊಡುವ ಹಾಗೆ ಸರಿಯಾದ ವಿಚಾರಣೆ ಮಾಡಿ ನಾವು ವಿಮುಕ್ತರಾಗಿ ಹೋಗುತ್ತೇವೆ, ಅದಕ್ಕೆ ಒಂದು ದಾರಿ ಮಾಡಬೇಕಾದುದು ಮುಖ್ಯ ಎಂದು. ಇದು ನನಗೆ ಬೇಕಾಗಿದೆ, ನಿಮಗೆ ಬೇಕೋ ಬೇಡವೊ ಗೊತ್ತಿಲ್ಲ. ಅದಕೋಸ್ಕರ ಹೇಳಿದ್ದೇನೆ ಪದೇ ಪದೇ ಹೇಳಿದ್ದೇನೆ; ನನ್ನನ್ನೇ ಮೊದಲು ವಿಚಾರಣೆಗೆ ಗುರಿ ಮಾಡಿ ಎನ್ನುವುದನ್ನು ಹೇಳುತ್ತಿದ್ದೇವೆ. ಶ್ರೀಮಾನ್ ನಿಜಲಿಂಗಪ್ಪನವರಿಗೂ ಹೇಳಿದೆ. ಆವರು ಹೇಳಿದರು, ನಾನು ಮಾಡುತ್ತೇನೆ, ಏಕೆ ಆಗುವುದಿಲ್ಲ ಎಂದು. ಪೌರುಷ ಮಾಡಬೇಡಿ,— ಹಳ್ಳಿಗಳಲ್ಲಿ ದೀಪಾವಳಿ ಹಬ್ಬಕ್ಕೆ ಪಟಾಕಿ ತಂದು ಕೊಡುತ್ತೇವೆ, ಅದರಲ್ಲಿ ಕೆಲವು ಪಟಾಕಿಗಳು ಹತ್ತುವುದಿಲ್ಲ, ಪುಸ್ ಎಂದು ಹೋಗುತ್ತವೆ. ಹಾಗೆ ಮಾಡಬೇಡಿ, ಎಂದು ಹೇಳಿದರೆ ಖಂಡಿತ ಮಾಡುತ್ತೇನೆ ಎಂದು ಹೇಳಿದರು. ಇದನ್ನು ನಾನು ಹಿಂದೆಯೇ ಹೇಳಿದ್ದೇನೆ. ಅಂಗಲಾಚಿ ಕೇಳಿಕೊಂಡೆ. ಮೊದಲು ಕಾನೂನು ತೆಗೆದುಕೊಂಡು ಬನ್ನಿ ೨೪ ಗಂಟೆಯೊಳಗೆ ಪಾಸ್‌ಮಾಡುತ್ತೇವೆಂದರೆ ಆ ಕಡೆಗೆ ನಿಮ್ಮ ಗಮನವೇ ಹೋಗಿಲ್ಲ ಕಾನೂನು ಮಾಡಿದರೆ ಭಯವೊ ಏನೋ? ಕಾನೂನು ಮಾಡಿ ಮೇಲೆ ಯಾರಾದರೂ ಸುಳ್ಳು ಅಪಾದನೆ ಮಾಡಿದರೆ, ಗುರುತರವಾದ ಶಿಕ್ಷೆಗೆ ಅವರನ್ನು ಗುರಿ ಮಾಡಬಹುದು ಅಂಥದನ್ನು ಮಾಡಿ ಎಂದರೆ ಅದನ್ನು ಅಲ್ಲಿಗೇ ಬಿಟ್ಟರು. ಲೋಕಪಾಲ, ಲೋಕ ಆಯುಕ್ತ ಬಿಲ್ ಬಂದಾಗ ಅಂಥದ್ದು ನಮಗೆ ಬೇಡ ಅಂದಿರಿ, ಪಬ್ಲಿಕ್ ಮೆನ್ ಎನ್ಕ್ವೈರಿ ಬಿಲ್ ತೆಗೆದುಕೊಳ್ಳಲಿಲ್ಲ. ಹೊರಗಡೆ ಮಾತನಾಡಿ ಎಂದು ಮಾನ್ಯ ಮುಖ್ಯ ಮಂತ್ರಿಗಳ ಬಾಯಿಂದ ಬಂದುದಕ್ಕೆ ನನಗೆ ದುಃಖವಾಗುತ್ತದೆ. ಹಳ್ಳಿಗಳಲ್ಲಿ ಹುಡುಗರು ಗೋಲಿ ಆಟ ಆಡುವಾಗ, ನನ್ನ ಕೇರಿಗೆ ಬಾರೋ, ನೋಡುತ್ತೇನೆ ಎಂದು ಹೇಳುವುದುಂಟು. ಆ ಧಾಟಿಯಲ್ಲಿ ಹೇಳಿದ ಹಾಗೆ ಆದೀತು. ಎಷ್ಟು ಜನರ ಮೇಲೆ ಕೇಸು ಹಾಕುತ್ತೀರಿ? ಹೊರಗಡೆಯವರು ಕಾನೂನು ಮಾಡುತ್ತಾರೆಯೋ ಇಲ್ಲವೊ ಆದೇ ಬೇಡ. ನಮ್ಮಲ್ಲಿ ಒಂದು ಕಾನೂನು ತನ್ನಿ ಎಂದರೆ ಅದರ ಕೆಡೆಗೆ ಗಮನ ಕೊಡುತ್ತಿಲ್ಲ. ಕೇಂದ್ರ ಸರ್ಕಾರದವರು ನೇಮಿಸಿದ್ದ ಸಂತಾನಂ ಕಮಿಟಿಯವರು ಒಂದು ಸೂಕ್ತ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ಗಮನಿಸುತ್ತಿಲ್ಲ. ಅದನ್ನೆಲ್ಲ ಬಿಟ್ಟು ಶ್ರೀ ವೀರೇಂದ್ರ ಪಾಟೀಲರು ಹೊಸ ಸೂತ್ರ ಕೊಡುತ್ತಿದ್ದಾರೆ, ಹೊರಗೆ ಬಂದು ಮಾತನಾಡಿ ಎಂದು, ಹೊರಗೆ ಬಂದು ಮಾತನಾಡುವುದಕ್ಕೆ ಹೆದರಬೇಕಾದ ಪ್ರಶ್ನೆ ಇಲ್ಲ. ಇದರ ನೂರರಷ್ಟು ಪಬ್ಲಿಕ್ ಸ್ವೀಚ್‌ನಲ್ಲಿ ಮಾತನಾಡುತ್ತಾರೆ, ನಿಮ್ಮ ಘನತೆ, ಗೌರವ, ನಿಮಗೆ ಸೇರಿದಷ್ಟೇ ನಮಗೂ ಸೇರಿದ್ದು. ದೇಶದ ಎರಡೂವರೆ ಕೋಟಿ ಜನರ ಪ್ರತಿನಿಧಿಯಾಗಿ ಎಲ್ಲಿಯವರೆಗೆ ಇರುತ್ತೀರಿ ಅಲ್ಲಿಯವರೆಗೆ ಮುಖ್ಯ ಮಂತ್ರಿ ಸ್ಥಾನದ ಗೌರವ ನಿಮ್ಮ ಒಬ್ಬರಿಗೆ ಅಲ್ಲ. ದೇಶಕ್ಕೆಲ್ಲಾ ಸೇರಿದ್ದು. ಮುಖ್ಯ ಮಂತ್ರಿ ಸ್ಥಾನದ ಗೌರವ ಹೋಗುತ್ತಿದೆ, ಬೀದಿ ಕಸವಾಗಿ ಹೋಗುತ್ತಿದೆ; ಅದನ್ನು ಉಳಿಸಿಕೊಳ್ಳಬೇಕು ಎಂದು ಇದ್ದರೆ, ಆ ಕಡೆಯ ಆಷ್ಟೊಂದು ನನ್ನ ಮಾನ್ಯ ಸದಸ್ಯರಿಗೆ ಮುಖ್ಯಮಂತ್ರಿ ಸ್ಥಾನದ ಗೌರವವನ್ನು ಉಳಿಸಿಕೊಳ್ಳಬೇಕು ಎಂದು ಇದ್ದರೆ, ನಾನು ಎಷ್ಟೋ ಸಲ ಹೇಳಿರುವಂತೆ ಒಂದು ಕಾನೂನು ಮಾಡಿ. ಅದರ ಪ್ರಕಾರ ಮುಂದುವರಿಯಿರಿ. ಅದನ್ನು ಬಿಟ್ಟು ಹೊರಗೆ ಬನ್ನಿ, ಮಾತನಾಡಿ ಎನ್ನುವುದು ಸರ್ವಸಮ್ಮತವಾದುದಲ್ಲ, ಈ ಸಭೆಗೆ ಭೂಷಣವಲ್ಲ ಆದುದರಿಂದ ನಾನು ಇನ್ನೂ ಒಮ್ಮೆ ಕೇಳಿಕೊಳ್ಳುತ್ತೇನೆ, ಶ್ರೀಮಾನ್ ನಿಜಲಿಂಗಪ್ಪನವರು ಪಾ ಂಭಮಾಡಿ ಅರ್ಧಕ್ಕೆ ನಿಲ್ಲಿಸಿರುವುದನ್ನು ಶುರು ಮಾಡಿ. ಅದಕ್ಕಾಗಿ ಒಂದು ಕಾಯಿದೆಯನ್ನು ತೆಗೆದುಕೊಂಡು ಬನ್ನಿ. ಅಡ್ಮಿನಿಸ್ಟ್ರೇಷನ್ ರಿಫಾರಮ್ಸ್ ರಕಮೆಂಡೇಷನ್ ಇದೆ, ಸಾಹಿತ್ಯ ಬೇಕಾದಷ್ಟಿದೆ. ಒಂದು ಕಾಯಿದೆಯನ್ನು ತೆಗೆದುಕೊಂಡು ಬಂದರೆ ಒಂದೇ ಒಂದು ದಿವಸದಲ್ಲಿ ಅದನ್ನು ಕಾನೂನನ್ನು ಮಾಡಿ ಕೊಡುತ್ತೇವೆ ಹೊರಗೆ ಬಂದು ಹೇಳಿ ಎಂದು ಹೇಳಿದಂಥ ಮಾತುಗಳನ್ನಾಡುವುದು ಸರಿಯಲ್ಲ ಶ್ರೀಮಾನ್ ಹುಚ್ಚಮಾಸ್ತಿಗೌಡರು ಸುಮಾರು ಇಪ್ಪತ್ತು ವರ್ಷಗಳಿಂದ ಈ ಮಾನ್ಯಸಭೆಯ ಸದಸ್ಯರಾಗಿದ್ದಾರೆ. ಸಾರ್ವಜನಿಕ ಕೆಲಸವನ್ನು ಲಘುವಾಗಿ ಭಾವಿಸಿ ಅವರು ಮಾಡಲಾರರು. ಒಂದು ವೇಳೆ ಮಾಡಿದರೆ ಅದಕ್ಕೆ ಪ್ರಾಯಶ್ಚಿತ್ತ ತೆಗೆದುಕೊಳ್ಳಲೇ ಬೇಕಾಗುತ್ತದೆ. ಆದುದರಿಂದ ಈ ಪರಿಶೀಲನೆಯನ್ನು ಮುಂದುವರಿಸಬೇಕು ಹಾಗು ಮುಂದೆ ಇಂಥ ಪ್ರಸಂಗ ಬಾರದಂತೆ ಕಾನೂನು ಮಾಡುತ್ತೇವೆ ಎಂದು ಅಶ್ವಾಸನೆಕೊಟ್ಟರೆ ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ವೀರೇಂದ್ರ ಪಾಟೀಲ :—ಈಗ ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರು ವಿಷಯವನ್ನು ಸೈಡ್ ಟ್ರ್ಯಾಕ್ ಮಾಡುತ್ತಿದ್ದಾರೆ. ಅವರು ವೈಯಕ್ತಿಕವಾಗಿ ಚಾರ್ಜ್ ಮಾಡಿದ್ದಾರೆ. ಚಾರ್ಜ್ ಪ್ರೂವ್ ಆಗುವುದಕ್ಕೆ ಒಂದು ಕಾನೂನು ಮಾಡಿ ಎಂದು ಹೇಳುವುದಕ್ಕೆ ಹೊರಟಿದ್ದಾರೆ.

SRI N. HUCHMASTHY GOWDA :—You have given permission to the Chief Minister to speak. I want to know under what rule you have given permission? Shall I have an opportunity to speak after that?

SRI D. DAYANANDASAGAR :—Kindly give us an opportunity afterwards.

MR. SPEAKER :—Sri Siddaveerappa is the leader of thr Ruling Congress. He has said something and had given some suggestions. That is why I allowed the Chief Minister.

SRI N. HUCHMASTHY GOWDA :—When he is allowed, let us also be permitttd to speak. When he is allowed to comment on the suggestions of the Hon. Member Sri Siddaveerappa, we have also right to comment on the remarks and suggestions of the Chief Minister.

SRI SADASHIVAPPA PATIL (Deodurg) :—On a point of order, Sir, ಇದುವರೆಗೆ ಮಾನ್ಯ ಸದಸ್ಯರೆಲ್ಲರೂ ಈ ಮಾನ್ಯ ಸಭೆಯ ಘನತೆ ಗೌರವ ಬಗ್ಗೆ ಬಹಳ ಕಳಕಳಿಯಿಂದ ಒಳ್ಳೆ ರೀತಿಯಿಂದ ನಡೆದುಕೊಳ್ಳಬೇಕೆಂದು ಹೇಳಿದರು. ಇವತ್ತಿನ ಪ್ರಸಂಗದಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಯಾರೂ ವೈಯಕ್ತಿಕವಾಗಿ ಯಾರ ಹೆಸರನ್ನು ತೆಗೆದುಕೊಂಡು ಯಾವುದೇ ಕೆಟ್ಟ ಭಾಷೆಯ ಮಾತನ್ನೂ ಆಡಲಿಲ್ಲ. ಇಲ್ಲಿ ಒಬ್ಬ ಮಾನ್ಯ ಸದಸ್ಯರು ಒಂದು ಕೆಟ್ಟ ಶಬ್ದ ಉಪಯೋಗ ಮಾಡಿದರು. ಅದಕ್ಕಾಗಿ ದಯವಿಟ್ಟು ತಮ್ಮಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಅದೇನೆಂದರೆ ಇವತ್ತು ಮಾನ್ಯ ಸದಸ್ಯರು ಒಂದು ಶಬ್ದ ಉಪಯೋಗ ಮಾಡಿದ್ದಾರೆ. ಆ ಶಬ್ದ ಉಪಯೋಗ ಮಾಡಲು ಇನ್ನೊಬ್ಬರಿಗೆ ಪರ್ಮಿಷನ್ ಕೊಡುತ್ತೀರಾ? ಉಪಯೋಗ ಮಾಡಿದ ಆ ಶಬ್ದವನ್ನು ವಾಪಸ್ಸು ತೆಗೆದುಕೊಳ್ಳಲು ಹೇಳುತ್ತೀರಾ? ಅಥವಾ ಇದನ್ನು ಪರಿಶೀಲಿಸಲು ಪ್ರಿವಿಲೆಜ್ ಕಮೀಟಿಗೆ ಕಳಿಸಿ ಕೊಡುತ್ತೀರಾ? ಇದು ನನ್ನ ಪಾಯಿಂಟ ಆಫ್ ಆರ್ಡರ್ ಆಗಿದೆ.

MR. SPEAKER :—The Hon. Members know that the word uttered by the Hon. Member Sri Dayananda Sagar was ordered to the expunged. There are various remedies under the rules for expunction, withdrawal and other things. When the words are expunged, no father steps are needed and the matter is stopped there.

CALLING ATTENTION TO A MATTER OF URGENT PUBLIC IMPORTANCE :

re : Social and Economic boycott of Harijans in Kambadanahalli of sidla ghatta Taluk.

SRI M.H. JAYAPRAKASH NARAYAN :— (Sirsi) I call the attention of the Chief Minister to the Social and Economic boycott of Harijans by caste Hindus in Kambadanahalli Sidlaghatta Taluk.